ಹಾಕುವುದಕ್ಕೆ ನನಗೆ ಅನುಕೂಲವಾಗುತ್ತದೆ. ನಮ್ಮವರೇ ಕಳ್ಳರಿದ್ದು ನಾವು ಮುಚ್ಚಿಕೊಂಡರೆ ನಾವು ಕಲ್‌ಪ್ರಿಟ್ಸ್ ಆಗುತ್ತೇವೆ. ಅದು ಆಗುವುದು ಬೇಡ ಅದು ಗೊತ್ತಾದರೆ ಅಂತಹವರಿಗೆ ಲೈಸೆನ್ಸ್ ಕೊಡಬೇಡಿ ಎಂದು ಹೇಳಬಹುದು. ಅಧಿಕಾರಸ್ಥರು ಆ ರೀತಿ ಮಾಡಿದ್ದರೆ ಅವರನ್ನು ಮನೆಗೆ ಕಳುಹಿಸಬಹುದು. ಏನೂ ಮಾಡದೇ ಸುಮ್ಮನೆ ಇಟ್ಟುಕೊಂಡರೆ ನಾನೂ ತಪ್ಪುಗಾರನಾಗುತ್ತೇನೆ, ನೀವೂ ತಪ್ಪುಗಾರರಾಗುತ್ತೀರಿ. ಅದಕ್ಕೋಸ್ಕರ ತಮ್ಮಲ್ಲಿ ಏನು ಮಾಹಿತಿ ಇದೆ ಅದನ್ನು ಕಳುಹಿಸಿರಿ, ನಾವೂ ನೀವೂ ಕೂಡಿ ಅವರನ್ನು ಮಟ್ಟ ಹಾಕುವುದಕ್ಕೆ ಪ್ರಯತ್ನ ಮಾಡೋಣ. ನಾವು ಇರುವುದು ರೈತರ ಕಲ್ಯಾಣ ಮಾಡುವುದರ ಸಲುವಾಗಿ. ಆ ದೃಷ್ಟಿಯಲ್ಲಿ ನಾನು ಎಳ್ಳಷ್ಟೂ ಯಾರಿಗೂ ಕಡಿಮೆಯಾಗಲಾರದಷ್ಟು ರೈತರ ಹಿತದ ಸಲುವಾಗಿ ಪ್ರಯತ್ನ ಮಾಡುತ್ತೇನೆ ಎಂದು ಹೇಳುತ್ತೇನೆ.

ಶ್ರೀ ಎಲ್.ಆರ್. ಶಿವರಾಮೇಗೌಡ : ಮಾನ್ಯ ಮಂತ್ರಿಗಳಿಂದ ಒಂದು ಸ್ಪಷ್ಟೀಕರಣ ಬೇಕು.

ಉಪಾಧ್ಯಕ್ಷರು : ಇಲ್ಲ, ಈಗ ವಾಟಾಳ್ ನಾಗರಾಜ್‌ರವರು ಗಮನ ಸೆಳೆಯಬೇಕು.

ಶ್ರೀ ವಾಟಾಳ್ ನಾಗರಾಜ್ : ಅವರದ್ದು ಆದಮೇಲೆ ನಾನು ಕೇಳುತ್ತೇನೆ.

ಉಪಾಧ್ಯಕ್ಷರು : ಈಗ ಶ್ರೀ ಚಂದ್ರೇಗೌಡರು ಅರಣ್ಯ ಮಂತ್ರಿಗಳ ಗಮನ ಸೆಳೆಯಬೇಕು.

ಶ್ರೀ ಎಲ್.ಆರ್. ಶಿವರಾಮೇಗೌಡ : ಯಾರು ಖದೀಮರು ಇದ್ದಾರೆ, ಕಳ್ಳರಿದ್ದಾರೆ, ಅವರ ಪಟ್ಟಿ ಕೊಡುತ್ತೇನೆ. ಅಲ್ಲಿ ಅಧಿಕಾರಿಗಳು ಭ್ರಷ್ಟರಿದ್ದಾರೆ. ಅಲ್ಲಿ ಏನು ಅವ್ಯವಹಾರ ನಡೆಯುತ್ತಿದೆ ಅದನ್ನು ತಡೆಗಟ್ಟುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ನಾನು ವಿನಂತಿ ಮಾಡುತ್ತೇನೆ.

---

(2) ಚಾಮರಾಜನಗರ-ಕೊಳ್ಳೇಗಾಲ ಅರಣ್ಯ ಪ್ರದೇಶದಲ್ಲಿ ಅಕ್ರಮವಾಗಿ ಗ್ರಾನೈಟ್ ಕಲ್ಲು ತೆಗೆಯುವುದರಿಂದ ನಿಸರ್ಗ ಸಂಪತ್ತು ನಾಶವಾಗುವುದರ ಜೊತೆಗೆ ವನ್ಯ ಮೃಗಗಳಿಗೆ ಪ್ರಾಣ ಭೀತಿ ಉಂಟಾಗುವುದು ಹಾಗೂ ಗಂಧದ ಕಳ್ಳ ಸಾಗಣೆದಾರ ವೀರಪ್ಪನನ್ನು ಹಿಡಿಯುವ ಕಾರ್ಯ ವಿಫಲವಾಗಿರುವುದು.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೇ, ಚಾಮರಾಜನಗರ-ಕೊಳ್ಳೇಗಾಲ ಅರಣ್ಯ ಪ್ರದೇಶದಲ್ಲಿ ಅಕ್ರಮವಾಗಿ ಗ್ರಾನೈಟ್ ಕಲ್ಲುಗಳನ್ನು ತೆಗೆಯುವುದರಿಂದ ನಿಸರ್ಗ ಸಂಪತ್ತು ನಾಶವಾಗುವುದರ ಜೊತೆಗೆ ವನ್ಯ ಮೃಗಗಳಿಗೆ ಪ್ರಾಣಭೀತಿ ಉಂಟಾಗಿರುವುದು ಹಾಗೂ ಗಂಧದ ಕಳ್ಳ ಸಾಗಣೆದಾರ ಶ್ರೀ ವೀರಪ್ಪನನ್ನು ಹಿಡಿಯುವ ಕಾರ್ಯವು ವಿಫಲವಾಗಿರುವ ಬಗ್ಗೆ ಮಾನ್ಯ ಅರಣ್ಯ ಮಂತ್ರಿಗಳ ಗಮನ ಸೆಳೆಯುತ್ತೇನೆ.

+ ಶ್ರೀ ಇ.ಟಿ. ಶಂಬುನಾಥ್ : (ಅರಣ್ಯ ರಾಜ್ಯ ಸಚಿವರು) : ಮಾನ್ಯ ಉಪಾಧ್ಯಕ್ಷರೇ. ತಮ್ಮ ಅಪ್ಪಣೆ ಪಡೆದು ಈ ಹೇಳಿಕೆಯನ್ನು ಮಾಡುತ್ತೇನೆ.

ಮೈಸೂರು ಜಿಲ್ಲೆಯ ಕೊಳ್ಳೇಗಾಲ ಹಾಗೂ ಚಾಮರಾಜನಗರ ಅರಣ್ಯ ಪ್ರದೇಶದಲ್ಲಿ ಕಲ್ಲು ಗಣಿ ಗುತ್ತಿಗೆಯನ್ನು ವೃತ್ತ ಅರಣ್ಯ ಸಂರಕ್ಷಣಾಧಿಕಾರಿ, ಮೈಸೂರು ಇವರು ಕರ್ನಾಟಕ ಮೈನರ್ ಮಿನರಲ್ ಕನ್ಸೆಷನ್ ನಿಯಮ 1969ರ ಪ್ರಕಾರ 41 ಸಂಸ್ಥೆಗಳಿಗೆ 1975ನೇ ಸಾಲಿನಿಂದ ಕೊಡುತ್ತಾ ಬಂದಿದ್ದರು.

ಏತನ್ಮಧ್ಯೆ 1979ರಲ್ಲಿ ಕರ್ನಾಟಕ ಮೈನರ್ ಮಿನರಲ್ ಕನ್ಸೆಶನ್ ನಿಯಮ 1969ನ್ನು ತಿದ್ದುಪಡಿಸಿ ಹೊಸದಾಗಿ ನಿಯಮವನ್ನು ಮಾಡಿ ಖಾಸಗಿ ಕಲ್ಲು ಗಣಿ ಗುತ್ತಿಗೆಯನ್ನು ಸಂಪೂರ್ಣವಾಗಿ ನಿಲ್ಲಿಸುವ ನಿಯಮವನ್ನು ಜಾರಿಗೆ ತರಲಾಯಿತು. ಅಲ್ಲದೆ ದಿನಾಂಕ 25-10-1980 ರಲ್ಲಿ ಭಾರತ ಅರಣ್ಯ ಸಂರಕ್ಷಣಾ ಕಾಯಿದೆ ಜಾರಿಗೆ

ಬಂದಿತು. ಈ ಕಾಯಿದೆಯನ್ವಯ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದ ಪೂರ್ವಾನುಮತಿಯಿಲ್ಲದೆ ಅರಣ್ಯ ಪ್ರದೇಶದಲ್ಲಿ ಗುತ್ತಿಗೆಯನ್ನು ಕೊಡಲು ಆಸ್ಪದ ಇಲ್ಲ. ಆದ್ದರಿಂದ ಗುತ್ತಿಗೆದಾರರು ತಮ್ಮ ಗುತ್ತಿಗೆಯನ್ನು ನವೀಕರಿಸಲು ಸಲ್ಲಿಸಿದ ಅರ್ಜಿಗಳನ್ನು ತಿರಸ್ಕರಿಸಲಾಯಿತು.

ಆದರೆ 1987ರಲ್ಲಿ ಮೂರು ಜನ ಖಾಸಗಿ ಗುತ್ತಿಗೆದಾರರು ಮತ್ತು 1988ರಲ್ಲಿ ಒಬ್ಬ ಖಾಸಗಿ ಗುತ್ತಿಗೆದಾರರ ಉಚ್ಚ ನ್ಯಾಯಲಯದಿಂದ ತಾತ್ಕಾಲಿಕ ತಡೆ ಆಜ್ಞೆಯನ್ನು ಪಡೆದು ಗಣಿ ಕೆಲಸವನ್ನು ಮುಂದುವರಿಸಿದರು. ಆಗ ಅರಣ್ಯ ಇಲಾಖೆಯು ಉಚ್ಚ ನ್ಯಾಯಲಯಕ್ಕೆ ಪ್ರತಿ ಅರ್ಜಿಯನ್ನು ಸಲ್ಲಿಸಿ ತಾತ್ಕಾಲಿಕ ಆಜ್ಞೆಯನ್ನು ತೆರವು ಮಾಡಬೇಕೆಂದು ಮತ್ತು ಕಲ್ಲು ಗಣಿ ಗುತ್ತಿಗೆಯನ್ನು ನಿಲ್ಲಿಸಬೇಕೆಂದು ಪ್ರಾರ್ಥಿಸಿತು. ಇದರ ಬಗ್ಗೆ ಇನ್ನೂ ಅಂತಿಮ ತೀರ್ಮಾನ ಬಂದಿಲ್ಲ.

1987-88ನೇ ಸಾಲಿನಲ್ಲಿ ರಾಜ್ಯ ಸರ್ಕಾರದ ಸಂಸ್ಥೆಯಿಂದ ಮೈಸೂರು ಮಿನರಲ್ಸ್‌ರವರು ಕೊಳ್ಳೇಗಾಲ ಅರಣ್ಯ ಪ್ರದೇಶದಲ್ಲಿ ಗುತ್ತಿಗೆಯ ಅವಧಿ ಮುಗಿದಿದ್ದ ಎರಡು ಕಲ್ಲು ಗಣಿ ಗುತ್ತಿಗೆಯನ್ನು ನವೀಕರಿಸಬೇಕೆಂದು ಪ್ರಾರ್ಥಿಸಿಕೊಂಡಿತು. ಇವೆರಡು ಕಲ್ಲು ಗಣಿಗಳು ಅರಣ್ಯ ಭಾಗದಲ್ಲಿ ಇದ್ದುದರಿಂದ ಕೇಂದ್ರ ಸರ್ಕಾರದ ಪೂರ್ವಾನುಮತಿ ಇಲ್ಲದೆ ಅರಣ್ಯ ಸಂರಕ್ಷಣಾ ಕಾಯಿದೆ 1980ರ ಅನ್ವಯ ರಾಜ್ಯ ಸರ್ಕಾರವು ನವೀಕರಿಸಲು ಆಸ್ಪದವಿಲ್ಲ. ಆದ್ದರಿಂದ ಈ ಎರಡು ಪ್ರಸ್ತಾವನೆಗಳನ್ನು ಪೂರ್ವಾನುಮತಿಗಾಗಿ ಭಾರತ ಸರ್ಕಾರಕ್ಕೆ ಕಳುಹಿಸಲಾಯಿತು.

ರಾಜ್ಯದ ಅರಣ್ಯಗಳು ಹಲವಾರು ರೀತಿಯದಾಗಿರುತ್ತವೆ. ಅವುಗಳಲ್ಲಿ ಮೊದಲನೆಯ ದರ್ಜೆಯ ಉತ್ಕೃಷ್ಟ ಕಾಡುಗಳೆಂದರೆ ನಿತ್ಯ ಹರಿದ್ವರ್ಣದ ಕಾಡುಗಳು, ಅರೆನಿತ್ಯ ಹರಿದ್ವರ್ಣದ ಕಾಡುಗಳು ಮತ್ತು ತೇವಾಂಶದಿಂದ ಕೂಡಿದಂತಹ ಡೆಸಿಡುಯಸ್ ಕಾಡುಗಳು. ಇದಲ್ಲದೆ ಎರಡನೇ ದರ್ಜೆಯ ಕಾಡುಗಳೆಂದರೆ ಒಣ ಡೆಸಿಡುಯಸ್ ಅರಣ್ಯ ಪ್ರದೇಶ ಹಾಗೂ ಕುರುಚಲು ಅರಣ್ಯ ಪ್ರದೇಶ.

ಅರಣ್ಯ ಶಾಸ್ತ್ರಾನುಸಾರವಾಗಿ ಕೊಳ್ಳೆಗಾಲ ಅರಣ್ಯ ಪ್ರದೇಶವು ಎರಡನೇ ದರ್ಜೆಯ ಒಣ ಅರಣ್ಯ ಪ್ರದೇಶವಾಗಿರುತ್ತದೆ. ಇಲ್ಲಿ ಉತ್ಕೃಷ್ಟವಾದ ಕಾಡುಗಳು ಇರುವುದಿಲ್ಲ.

ಆದ್ದರಿಂದ ಅರಣ್ಯ ಸಂರಕ್ಷಣಾ ಕಾಯಿದೆ ಮತ್ತು ಇತರ ಎಲ್ಲಾ ಕಾಯದೆಗಳಿಗನುಗುಣವಾಗಿ ಈ ಎರಡು ಕಲ್ಲು ಗಣಿ ಗುತ್ತಿಗೆಯು ಕೊಳ್ಳೇಗಾಲ ಅರಣ್ಯ ಪ್ರದೇಶದಲ್ಲಿ ಕೆಲಸ ಮಾಡುತ್ತಿದೆ.

ದಿನಾಂಕ : 22-5-1990ರಲ್ಲಿ ಕರ್ನಾಟಕ ಮೈನರ್ ಮಿನರಲ್ ಕನ್ಸೆಷನ್ ನಿಯಮ 1969ನ್ನು ಪುನಃ ತಿದ್ದುಪಡಿ ಮಾಡಿ ಖಾಸಗಿ ಸಂಸ್ಥೆಗಳಿಗೂ ಸಹ ಕಲ್ಲು ಗಣಿ ಗುತ್ತಿಗೆಯನ್ನು ಪಡೆಯಲು ಅವಕಾಶ ಮಾಡಿಕೊಡಲಾಯಿತು.

ಈ ತಿದ್ದುಪಡಿ ಆದ ಮೇಲೆ 12 ಖಾಸಗಿ ಸಂಸ್ಥೆಗಳವರು ಉಚ್ಚ ನ್ಯಾಯಲಯಕ್ಕೆ ಅರ್ಜಿ ಸಲ್ಲಿಸಿ ನವೀಕರಿಸದೆ ಇದ್ದಂತಹ ಕಲ್ಲು ಗಣಿ ಗುತ್ತಿಗೆಯನ್ನು ಮುಂದುವರಿಸಲು ಉಚ್ಚ ನ್ಯಾಯಾಲಯದಿಂದ ತಾತ್ಕಾಲಿಕ ಆಜ್ಞೆ ಪಡೆದು ಕೆಲಸವನ್ನು ಮುಂದುವರಿಸಿದರು. ಈ ತಾತ್ಕಾಲಿಕ ಆಜ್ಞೆ ಬಂದ ಕೂಡಲೇ ಅರಣ್ಯ ಇಲಾಖೆಯು ಈ 12 ಸಂಸ್ಥೆಗಳ ಮೇಲೂ ಉಚ್ಚ ನ್ಯಾಯಲಯಕ್ಕೆ ಅರ್ಜಿ ಸಲ್ಲಿಸಿ ತಕ್ಷಣವೇ ತಾತ್ಕಾಲಿಕ ಆಜ್ಞೆಯನ್ನು ತೆರವು ಮಾಡಬೇಕೆಂದು ಮತ್ತು ಗಣಿ ಗುತ್ತಿಗೆಯ ಕೆಲಸವನ್ನು ನಿಲ್ಲಿಸಬೇಕೆಂದು ಪ್ರಾರ್ಥಿಸಲಾಯಿತು. ಈ ಅರ್ಜಿಗಳನ್ನು ಸ್ವಲ್ಪವು ವಿಳಂಬವಿಲ್ಲದೆ ಉಚ್ಚ ನ್ಯಾಯಲಯಕ್ಕೆ ಸಲ್ಲಿಸಲಾಯಿತು. ಇವು ಈಗ ಉಚ್ಚ ನ್ಯಾಯಲಯದ ಮುಂದಿವೆ. ಈ ಅರ್ಜಿಗಳನ್ನು ಕೂಡಲೇ ನ್ಯಾಯಾಂಗದ ಮುಂದೆ ತರಬೇಕೆಂದು ಕಾನೂನು ಇಲಾಖೆಯ ಕಾರ್ಯದರ್ಶಿಯವರಿಗೆ ಅರಣ್ಯ ಇಲಾಖೆಯು ಅನೇಕ ಸಲ ಪ್ರಾರ್ಥಿಸಿಕೊಂಡಿದೆ. ಈ

12 ಖಾಸಗಿ ಸಂಸ್ಥೆಗಳಿಗೂ ತಾತ್ಕಾಲಿಕ ಆಜ್ಞೆಯನ್ನು ನ್ಯಾಯಲಯವು ಎಕ್ಸ್-ಪಾರ್ಟಿಯಾಗಿ ಕೊಟ್ಟಿದ್ದರಿಂದ ಉಳಿದ ಖಾಸಗಿ ಕಲ್ಲುಗಣಿ ಗುತ್ತಿಗೆದಾರರು ಸಹಾ ಇದೇ ರೀತಿ ಎಕ್ಸ್ ಪಾರ್ಟಿ ತಾತ್ಕಾಲಿಕ ತಡೆಯಾಜ್ಞೆಯನ್ನು ತರದಂತೆ ತಡೆಯಲು ಅರಣ್ಯ ಇಲಾಖೆಯು ಉಚ್ಚ ನ್ಯಾಯಾಲಯಕ್ಕೆ "ಕೇವಿಯಟ್ "ಅರ್ಜಿಯನ್ನು ಸಲ್ಲಿಸಿತು. ಈ ಅರ್ಜಿಯನ್ನು ಸಲ್ಲಿಸಿದ ನಂತರ ಉಚ್ಚ ನ್ಯಾಯಾಲಯವು ಯಾವುದೇ ಖಾಸಗಿ ಸಂಸ್ಥೆಗಳಿಗೆ ಕಲ್ಲು ಗಣಿ ಗುತ್ತಿಗೆಯನ್ನು ಮುಂದುವರಿಸಲು ತಾತ್ಕಾಲಿಕ ತಡೆಯಾಜ್ಞೆಯನ್ನು ನೀಡಿಲ್ಲ.

ಆದ್ದರಿಂದ ಈಗ ಭಾರತ ಸರ್ಕಾರದ ಪೂರ್ವಾನುಮತಿ ಪಡೆದ ಎರಡು ಕಲ್ಲು ಗಣಿ ಗುತ್ತಿಗೆಗಳು ಮತ್ತು ಉಚ್ಚ ನ್ಯಾಯಾಲಯದಿಂದ ತಾತ್ಕಾಲಿಕ ತಡೆಯಾಜ್ಞೆ ಪಡೆದ 16 ಕಲ್ಲುಗಣಿ ಗುತ್ತಿಗೆಗಳು ಮಾತ್ರ ಚಾಮರಾಜನಗರ ಹಾಗೂ ಕೊಳ್ಳೆಗಾಲ ಅರಣ್ಯ ಪ್ರದೇಶದಲ್ಲಿ ಕಲ್ಲು ಗಣಿ ಕೆಲಸವನ್ನು ನಡೆಸುತ್ತಿವೆ. ಈ ಕಲ್ಲುಗಣಿ ಗುತ್ತಿಗೆದಾರರು ಕೆಲಸ ಮಾಡುತ್ತಿರುವ ಸ್ಥಳ ಮೊದಲೇ ಕೆಲಸ ಮಾಡಿರುವ ಸ್ಥಳವಾದುದರಿಂದ ಹೊಸದಾಗಿ ಯಾವುದೇ ರೀತಿಯ ಮರಗಳನ್ನು ಕಡಿಯುವ ಅಥವಾ ಅರಣ್ಯ ನಾಶವಾಗುವ ಪ್ರಸಂಗ ಉದ್ಭವಿಸುವುದಿಲ್ಲ. ಈಗಾಗಲೇ ಹೇಳಿದಂತೆ ಎರಡು ಕಲ್ಲು ಗಣಿ ಗುತ್ತಿಗೆಗಳಿಗೆ ಭಾರತ ಸರ್ಕಾರವು ಪೂರ್ವಾನುಮತಿ ನೀಡಿರುವುದರಿಂದ ಭಾರತ ಅರಣ್ಯ ಸಂರಕ್ಷಣಾ ಕಾಯಿದೆ-1980ರ ಉಲ್ಲಂಘನೆ ಸಹ ಆಗಿರುವುದಿಲ್ಲ.

ಕಳ್ಳಸಾಗಣೆದಾರ ಹಾಗೂ ದರೋಡೆಗಾರ ವೀರಪ್ಪನ್‌ನನ್ನು ಹಿಡಿಯಲು ಕೇವಲ ಅರಣ್ಯ ಇಲಾಖೆಯಿಂದ ಆಗುವುದಿಲ್ಲವೆಂದು ಅರಿತು ಈ ಕಾರ್ಯವನ್ನು ರಾಜ್ಯ ಸರ್ಕಾರವು ಕೂಲಂಕುಷವಾಗಿ ಪರಿಶೀಲಿಸಿದ ನಂತರ ಒಂದು ವಿಶೇಷ ದಳವನ್ನು ಐ.ಜಿ.ಪಿ.(ಪೋಲೀಸ್) ನೇತೃತ್ವದಲ್ಲಿ ಸ್ಥಾಪಿಸಿ ಅದು ಈಗಾಗಲೇ ಕಾರ್ಯೋನ್ಮುಖವಾಗಿದೆ. ಈ ಕಾರ್ಯಚರಣೆಗೆ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರಕ್ಕೆ ಬರೆಮಾ ರೂ.20 ಲಕ್ಷಗಳನ್ನು ಮಂಜೂರಾತಿ ಪಡೆದು ವಾಹನಗಳನ್ನು, ಬಂದೂಕಗಳನ್ನು ಹಾಗೂ ಕೋವಿಗಳನ್ನು ಅಲ್ಲದೆ ನಿಸ್ತಂತು ಉಪಕರಣಗಳನ್ನು ಕೊಂಡು ಕೊಂಡು ಕಾರ್ಯಚರಣೆಯಲ್ಲಿ ಉಪಯೋಗಿಸಲಾಗುತ್ತಿದೆ. ವಿಶೇಷ ಐ.ಜಿ.ಪಿ. (ಪೋಲಿಸ್)ರವರಿಗೆ ಸಹಾಯವಾಗಿರಲು ಒಬ್ಬ ಉಪ ಅರಣ್ಯ ಸಂರಕ್ಷಣಾಧಿಕಾರಿ ಅವರನ್ನು ಎರವಲು ಸೇವೆಯ ಮೇಲೆ ಕಳುಹಿಸಲಾಗಿದೆ. ಪೋಲೀಸ್ ಹಾಗೂ ಅರಣ್ಯ ಇಲಾಖೆಯು ಸೇರಿ ರಚಿಸಿದ ವಿಶೇಷ ದಳದ ಕಾರ್ಯಚರಣೆಯಿಂದ ಈಗಾಗಲೇ ಅನೇಕ ಜನ ವೀರಪ್ಪನ್‌ನ ಸಂಗಡಿಗರನ್ನು ದಸ್ತಗಿರಿ ಮಾಡಿ ವೀರಪ್ಪನ್‌ನ ಓಡಾಟವನ್ನು ಕಡಿಮೆ ಮಾಡಿ, ಅವನ ಚಲನವಲನಗಳ ಮೇಲೆ ಹೆಚ್ಚಿನಾ ನಿಗಾ ಇಡುವುದಕ್ಕೆ ಅನುವಾಗಿದೆ. ಕರ್ನಾಟಕದಲ್ಲಿ ಅಷ್ಟೇ ಅಲ್ಲ ಪಕ್ಕದ ತಮಿಳುನಾಡು ರಾಜ್ಯ ಅರಣ್ಯ ಹಾಗೂ ಪೋಲೀಸ್ ಇಲಾಖೆಯವರು ವಿಶೇಷ ದಳವನ್ನು ರಚಿಸಿಕೊಂಡು ವೀರಪ್ಪನ್‌ನನ್ನು ಹಿಡಿಯಲು ಶ್ರಮಿಸುತ್ತಿದ್ದಾರೆ.

+ಶ್ರೀ ಡಿ.ಬಿ. ಚಂದ್ರೇಗೌಡ : ಸನ್ಮಾನ್ಯ ಉಪಾಧ್ಯಕ್ಷಣೆಯವರೆ ಈ ಸರ್ಕಾರಕ್ಕೆ ಬಹುಶಃ ಈ ನಿಸರ್ಗ ಸಂಪತ್ತಿನ ಲೂಟಿಯ ಪರಿಣಾಮದ ಕಲ್ಪನೆ ಇದ್ದ ಹಾಗೆ ನನಗೆ ಕಾಣಲಿಲ್ಲ. ಈ ಲೂಟಿ ಪ್ರಾರಂಭವಾದುದು 1987-88ರಿಂದೀಚೆಗೆ ಅರ್ಥಾತ್ ಹಿಂದಿನ ಸರ್ಕಾರ ಹೋದ ಮೇಲೆ ಇದು ಗಮನಿಸಬೇಕಾದಂಥ ಅಂಶ. ನೀವು ಇದನ್ನು ನಿಲ್ಲಿಸಿದ್ದೀರಾ? ಕೇಂದ್ರ ಸರ್ಕಾರ ಇದರ ಬಗ್ಗೆ ಒಂದು ತಿದ್ದುಪಡಿ ಮಾಡಿದೆಯೆಂದು ಹೇಳಿದ್ದೀರಿ ಅದನ್ನು ಬಿಟ್ಟು ಏನೂ ಹೇಳುವುದಿಲ್ಲ. ನಾನು ಇದನ್ನು ಹೇಳುವಾಗ, ಸರ್ಕಾರವನ್ನು ದೂಷಣೆ ಮಾಡುವುದಷ್ಟೇ ನನ್ನ ಉದ್ದೇಶವಲ್ಲ. ನೀವು ಆ ದೃಷ್ಟಿಯಲ್ಲಿ ತೆಗೆದುಕೊಳ್ಳಬೇಕಾಗಿಲ್ಲ. ನಿಸರ್ಗ ಸಂಪತ್ತನ್ನು ಕಾಯ್ದುಕೊಂಡು ಬರುವ ಅತ್ಯಂತ ದೊಡ್ಡ ಜವಾಬ್ದಾರಿ ಯಾವುದೇ ಸರ್ಕಾರಕ್ಕಾದರೂ ಇರಬೇಕು. ತಾವು ಹೇಳಿದ ಪ್ರಕಾರ, ಉಚ್ಚನ್ಯಾಯಾಲಯದಿಂದ ತಡೆಯಾಜ್ಞೆ ತಂದು ನಡೆಸುತ್ತಿದ್ದಾರೆ,

ಇನ್ನೂ ಎರಡು ಜನಕ್ಕೆ ಕೇಂದ್ರ ಸರ್ಕಾರ ಮಂಜೂರಾತಿ ಕೊಟ್ಟಿದೆ. ನಾವೂ ಅರಣ್ಯ ಪ್ರದೇಶದಿಂದ ಬರತಕ್ಕ ಜನ. ಆ ಕಾರಣದಿಂದ ಈ ಕಳಕಳಿಯನ್ನು ಹೇಳುತ್ತಿದ್ದೇನೆ. ಶೇಕಡ 24 ರಷ್ಟು ಅರಣ್ಯವನ್ನು ಕೇರಳದವರು ರಕ್ಷಣೆ ಮಾಡಿಕೊಂಡು ಬರುತ್ತಿದ್ದಾರೆ. ನಮ್ಮ ಸ್ಥಿತಿ ಏನಾಗಿದೆ? ಮುಖ್ಯವಾಗಿ ಇದರಿಂದ ರಾಜ್ಯ ಸರ್ಕಾರಕ್ಕೆ ಬರತಕ್ಕಂಥ ಹಣವೂ ಬರುವುದಿಲ್ಲ. ನಮ್ಮ ಹಳ್ಳಿಯಲ್ಲಿ ಯಾರಾದರೂ ಒಂದು ಕಾಡು ಹಂದಿಯನ್ನು ಹೊಡೆದರೆ ಹೊಡೆದವನನ್ನು ಬೆಳಿಗ್ಗೆ ಹಿಡಿದುಕೊಂಡು ಹೋಗುತ್ತಾರೆ. ಕಾಡು ಕೋಳಿಯನ್ನು ಹೊಡೆದವನನ್ನೂ ಹಿಡಿದುಕೊಂಡು ಹೋಗುತ್ತಾರೆ. ಆದರೆ ಇಲ್ಲಿ ಬೆಳಿಗ್ಗೆಯಿಂದ ಸಾಯಾಂಕಾಲದವರೆಗೂ ಸಿಡಿ ಮದ್ದುಗಳನ್ನು ಹಾಕಿ ಇಡೀ ಅರಣ್ಯ ಪ್ರದೇಶ ನಡುಗುವಂತೆ ಮಾಡಿದ್ದಾರೆ. ಬರೀ ಅರಣ್ಯ ನಡುಗುವುದಲ್ಲ ಸುತ್ತಮುತ್ತಲಿರುವ ದೇವಾಲಯಗಳಿಗೆ ಪೂಜೆ ಪುನಸ್ಕಾರಗಳಿಗೆ ಹೋಗದಂಥ ಪರಿಸ್ಥಿತಿಯನ್ನು ಚಾಮರಾಜನಗರದ ಜನರಿಗೆ ತಂದಿದ್ದಾರೆ. ನ್ಯಾಯಾಲಯ 12ಖಾಸಗಿ ಸಂಸ್ಥೆಗಳಿಗೆ ತಡೆ ಆಜ್ಞೆ ಕೊಟ್ಟಿದೆಯೆಂದು ಹೇಳಿದ್ದೀರಿ. ಸರ್ಕಾರದಿಂದ ನೇಮಿತವಾದಂಥ ಬೇಕಾದಷ್ಟು ಜನ ವಕೀಲರುಗಳಿದ್ದಾರಲ್ಲಾ, ಅವರು ಏನು ಮಾಡುತ್ತಿದ್ದಾರೆ? ಬರೀ ತಡೆಯಾಜ್ಞೆಯನ್ನು ತಡೆಯುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ಹೇಳಿದರೆ ಅಲ್ಲಿ ನಮ್ಮ ಸರ್ಕಾರದ ವಕೀಲರುಗಳು ಏಕಿರಬೇಕು? ಇವರು ಇದರ ಬಗ್ಗೆ ಮಾಡಿರತಕ್ಕಂಥ ಪ್ರಯತ್ನವಾದರೂ ಏನು? ಇನ್ನು ಎರಡನೆಯದು, ಈ ಅರಣ್ಯ ಕಾದಿಟ್ಟಿರತಕ್ಕಂಥ ಪ್ರದೇಶ. ಇದರೊಳಗೆ ಹೋಗುವುದಕ್ಕೆ ಯಾರಿಗೂ ಪ್ರವೇಶವಿಲ್ಲ. ವನ್ಯ ಜೀವಿಗಳ ರಕ್ಷಣೆಯಾಗಬೇಕು. ಒಣಗಿದ ಮರವನ್ನು ಈಚೆಗೆ ತಂದ ರೈತರನ್ನು ಹಿಡಿಯುತ್ತೀರಿ ಆಕಸ್ಮತ್ತಾಗಿ ಯಾವುದೋ ಒಂದು ಸಾರಿ ತಮ್ಮ ಬೆಳೆ ರಕ್ಷಣೆ ಮಾಡಿಕೊಳ್ಳುವ ಸಲುವಾಗಿ ಒಂದು ಹಂದಿಯನ್ನೋ, ಒಂದು ಹುಲಿಯನ್ನೋ ಹೊಡೆದರೆ, ಅವರುಗಳನ್ನು ಹಿಡಿಯುತ್ತೀರಿ. ಆದರೆ, ಇಲ್ಲಿ ದೊಡ್ಡ ಪ್ರಮಾಣದಲ್ಲಿ ನಡೆಯುವ ಲೂಟಿಯನ್ನು ನಿಲ್ಲಿಸುವುದಕ್ಕೆ ಯಾವ ರೀತಿ ಕ್ರಮವನ್ನು ಕೈಗೊಳ್ಳುತ್ತೀರಿ? ಇಲ್ಲಿ ಆಗುತ್ತಿರುವುದು ಬರೀ ನಿಸರ್ಗದ ಲೂಟಿ ಅಷ್ಟೇ ಅಲ್ಲ, ರಾಜ್ಯದ ಬಂಡವಾಳಕ್ಕೆ ಬರತಕ್ಕ ಉತ್ಪತ್ತಿ ಕೂಡಾ ನಷ್ಟವಾಗುತ್ತಿದೆ. ಇದನ್ನು ತುಂಬುಕೊಳ್ಳುವುದಕ್ಕೆ ಯಾವ ರೀತಿ ಕ್ರಮವನ್ನು ತೆಗೆದುಕೊಳ್ಳುತ್ತೀರಿ? ಮತ್ತೊಂದು ವಿಷಯವನ್ನು ತಮ್ಮ ಹೇಳಿಕೆಯಲ್ಲಿ ಹೇಳಿದ್ದೀರಿ. ದಿನಾಂಕ: 22-5-90 ರಲ್ಲಿ ಕರ್ನಾಟಕ ಮೈನರ್ ಮಿನರಲ್ ಕನ್ಸೆಷನ್ ನಿಯಮ 1969 ಅನ್ನು ತಿದ್ದುಪಡಿ ಮಾಡಿದ ಮೇಲೆ ಖಾಸಗಿ ಸಂಸ್ಥೆಗಳಿಗೆ ಕಲ್ಲು ಗಣಿ ಗುತ್ತಿಗೆ ಪಡೆಯಲು ಅವಕಾಶ ಮಾಡಿಕೊಡಲಾಯಿತು. ಎಂದು ಹೇಳಿದ್ದೀರಿ. ಅಲ್ಲಿಯವರೆಗೆ ಈ ಅವಕಾಶ ಇರಲಿಲ್ಲ. ಆದರೆ ಈ ತಿದ್ದುಪಡಿ ಮಾಡಿ ಈ ನಿಸರ್ಗದ ಲೂಟಿಗೆ ಅವಕಾಶ ಕೊಟ್ಟಿದ್ದೀರಲ್ಲ. ಈಗ ಆಗುತ್ತಿರುವ ಅನ್ಯಾಯವನ್ನು ಸರಿಪಡಿಸುವುದಕ್ಕೆ ತಿದ್ದುಪಡಿಯನ್ನು ಪುನರ್ ಪರಿಶೀಲನೆ ಏನಾದರೂ ಮಾಡುತ್ತೀರೋ ಎಂದು ಕೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಸನ್ಮಾನ್ಯ ಉಪಾಧ್ಯಕ್ಷರೆ, ನಮ್ಮ ರಾಜ್ಯದ ನಿಸರ್ಗ ಸಂಪತ್ತಿನ ನಾಶ ಮತ್ತು ಗ್ರಾನೈಟ್ ಕಲ್ಲಿನ ಲೂಟಿ ಬಗ್ಗೆ ನಿರಂತರವಾಗಿ ಈ ಸಭೆಯಲ್ಲಿ ಹೇಳುತ್ತಿದ್ದೇವೆ. ಇದು ಕೇವಲ ಅರಣ್ಯ ಪ್ರದೇಶಗಳಲ್ಲಿ ಮಾತ್ರ ಅಲ್ಲ, ಸಮಗ್ರವಾಗಿ ಬೇರೆ ಬೇರೆ ಎಲ್ಲಾ ಪ್ರದೇಶಗಳಲ್ಲೂ ನಡೆಯುತ್ತಿದೆ. ಆದರೆ, ಇವತ್ತಿನ ಪ್ರಶ್ನೆ ಅರಣ್ಯ ಪ್ರದೇಶಕ್ಕೆ ಸೀಮಿತವಾತಗಿರತಕ್ಕಂಥಾದ್ದು ಅದರಲ್ಲೂ ಪ್ರಮುಖವಾಗಿ ಮಲೆ ಮಹದೇಶ್ವರ ಬೆಟ್ಟದ ಪರಿಸರ ಮತ್ತು ಬಿಳಿಗಿರಿ ರಂಗನಾಥ ಸ್ವಾಮಿ ಬೆಟ್ಟದ ಪರಿಸರ ಹಾಳಾಗುತ್ತಿರುವ ಬಗ್ಗೆ ಮಾತನಾಡುತ್ತೇವೆ. ಹಿಂದೆ ಮಹದೇಶ್ವರ ಬೆಟ್ಟಕ್ಕೆ ಹೋಗಬೇಕಾದರೆ, ಏಳು ಮಲೈ, ಎಪ್ಪತ್ತೇಳು ಮಲೈಗಳನ್ನು ಕಾಲು ನಡಿಗೆಯಲ್ಲಿ ದಾಟಿಕೊಂಡು ಹೋಗುತ್ತಿದ್ದರು. ಇವತ್ತು ಕಾಲು ನಡಿಗೆಯ ದಾರಿಯೂ ಅಲ್ಲಿ ಇಲ್ಲ. ಬಿಳಿಗಿರಿ ರಂಗನ ಬೆಟ್ಟದ ಅರಣ್ಯದಲ್ಲಿ ವನ್ಯ ಮೃಗಗಳು ಅಪಾರವಾಗಿದೆ. ಅಪಾರವೆಂದರೆ ಅಷ್ಟಿಷ್ಟಲ್ಲ.

1.05 ಪಿ.ಎಂ.

ಆರು ಗಂಟೆಯ ಮೇಲೆ ಆ ರಸ್ತೆಯಲ್ಲಿ ಹೋದರೆ ನೂರಾರು ಕಾಡಾನೆಗಳು ಕಣ್ಣಿದುರು ಬರುತ್ತವೆ. ಇದೆಲ್ಲದೆ ಈ ಡೈನಾಮೇಟಿನ ಶಬ್ದಕ್ಕೆ ಶ್ರೀ ಬಿಳಿಗಿರಿ ರಂಗನಾಥ ಸ್ವಾಮಿ ದೇವಸ್ಥಾನದಲ್ಲಿರುವ ದೇವಿವಿಗ್ರಹ ಸಹ ಅದುರುತ್ತದೆ ಎಂದು ಪೂಜಾರಿಗಳು ಮಾತನಾಡುತ್ತಾರೆ. ಈ ಎರಡೂ ಪ್ರದೇಶಗಳಲ್ಲಿ ವನ್ಯಮೃಗಗಳು ಮತ್ತು ಸಂಪತ್ತು ಹೇರಳವಾಗಿದೆ. ಈ ಪ್ರದೇಶ ಕಾಯ್ದಿಟ್ಟ ಅರಣ್ಯ ಪ್ರದೇಶ ಈ ಕಾಯ್ದಿಟ್ಟ ಅರಣ್ಯ ಪ್ರದೇಶಕ್ಕೆ ನಾವು ಯಾರಾದರೂ ಮನುಷ್ಯರು ಹೋಗಬೇಕಾದರೂ ಆರು ಗಂಟೆಯ ಮೇಲೆ ಆ ರಸ್ತೆಯಲ್ಲಿ ಒಂದು ಚೈನನ್ನು ಕಟ್ಟಿರುತ್ತಾರೆ. ಯಾರೂ ಸಹ ಆರು ಗಂಟೆಯ ಮೇಲೆ ಹೋಗುವುದಕ್ಕೆ ಸಾಧ್ಯವೇ ಇಲ್ಲ. ಇದಲ್ಲದೆ.....

ಉಪಾಧ್ಯಕ್ಷರು: ಸ್ಟೇಟ್‌ಮೆಂಟ್ ಮೇಲೆ ಕ್ಲಾರಿಫಿಕೇಶನ್ ಕೇಳಿ.

ಶ್ರೀ ವಾಟಾಳ್ ನಾಗರಾಜ್: ನೀವು ಹೇಳಿ ಅಂದಿರಿ. ಮತ್ತೆ ನೀವು ತಿರುಗಿ ನನ್ನನ್ನು ದಾರಿ ತಪ್ಪಿಸುತ್ತಿದ್ದೀರಿ. ನಾನು ಆ ಉದ್ದೇಶ ಇಟ್ಟುಕೊಂಡಿಲ್ಲ.

ಉಪಾಧ್ಯಕ್ಷರು: ಇದು ಕಾಲ್ ಅಟೆನ್‌ಷನ್ ಇದೆ ಏನು ಕ್ಲಾರಿಫಿಕೇಶನ್ ಬೇಕೊ ಅದನ್ನು ಕೇಳಿ.

ಶ್ರೀ ವಾಟಾಳ್ ನಾಗರಾಜ್: ಇವತ್ತು ನಾವು ನ್ಯಾಯಾಲಯದಲ್ಲಿ ಕೇಸುಗಳು ಇವೆ. ತಡೆ ಆಜ್ಞೆ ತಂದಿದ್ದಾರೆ. ಎಂದು ಹೇಳಿದಿರಿ. ತಡೆ ಆಜ್ಞೆ ಬಂತು ಎಷ್ಟು ಆಗಿದೆ ಎಷ್ಟು ತಿಂಗಳು ಆಗಿದೆ. ಈ ತಡೆ ಆಜ್ಞೆ ತೆಗೆಸುವುದಕ್ಕೆ ಕರ್ನಾಟಕ ಸರ್ಕಾರದವರು ಏನು ಪ್ರಯತ್ನವನ್ನು ಮಾಡಿದ್ದಾರೆ. ಮತ್ತು ಈ ಅರಣ್ಯ ಪ್ರದೇಶದಲ್ಲಿ ಎಷ್ಟು ಮೀಟರ್ ಆಳ ಕಲ್ಲನ್ನು ತೆಗೆಯಬಹುದು ಎಂಬ ನಿಯಮ ಇದೆ, ಅದನ್ನು ತಾವು ಹೇಳಬೇಕು. ಆರು ಮೀಟರ್ ಆಳದಲ್ಲಿ ಕಲ್ಲನ್ನು ತೆಗೆಯಬೇಕು ಎಂದು ಇದೆ. ಮಹದೇಶ್ವರ ಬೆಟ್ಟದ ಪರಿಸರದಲ್ಲಿ ಬಿಳಿಗಿರಿ ರಂಗನ ಬೆಟ್ಟದ ಪರಿಸರದಲ್ಲಿ ಎರಡೂ ಸೇರಿ 45-50 ಪ್ರದೇಶದಲ್ಲಿ ಆರು ಮಿಟರ್‌ಗಿಂತ ಹೆಚ್ಚಿಗೆ 30 ಮೀಟರ್ ಕೆಲಗಡೆ ಕಲ್ಲನ್ನು ತೆಗೆದಿರತಕ್ಕದ್ದು ಜನಜನಿತವಾಗಿದೆ. ನಾನು ಸಹ ನೋಡಿದ್ದೇನೆ. ಈ ಪ್ರದೇಶದಲ್ಲಿ ತಮ್ಮ ಇಲಾಖೆಯ ಅಧಿಕಾರಿಗಳು ಹೋಗಿ ಗ್ರಾನೈಟ್ ಮಾಲೀಕರ ಹತ್ತಿರ ನೀವು ಆರು ಮೀಟರಿಗಿಂತ ಹೆಚ್ಚು ಆಳ ಕಲ್ಲನ್ನು ತೆಗೆಯಕೂಡದು ಎಂದು ಹೇಳಿದರೆ ಅವರು ಅರಣ್ಯ ಇಲಾಖೆಯ ಅಧಿಕಾರಿಗಳನ್ನು ದಬ್ಬಿ ಹೊರಗೆ ಕಳಿಸಿದ್ದಾರೆ. ನಮಗೆ ಸರ್ಕಾರದ ರಕ್ಷಣೆ ಇದೆ ಎಂದು ಗ್ರಾನೈಟ್ ಮಾಲೀಕರು ಅರಣ್ಯ ಇಲಾಖೆಯ ಅಧಿಕಾರಿಗಳ ಮೇಲೆ ದಬ್ಬಾಳಿಕೆ ಮಾಡಿದ್ದಾರೆ. ನಾನು ಮಾನ್ಯ ಸಚಿವರಲ್ಲಿ ಗಮನಕ್ಕೆ ತರುತ್ತಿದ್ದೇನೆ. ಇದನ್ನು ಯಾವುದೇ ಒಂದು ವೈಯಕ್ತಿಕವಾದ ಪ್ರಶ್ನೆ ಎಂದು ನೀವು ತೆಗೆದುಕೊಳ್ಳುವುದು ಬೇಡ ನಾವೂ ತೆಗೆದುಕೊಳ್ಳುವುದು ಬೇಡ. ಈ ರಾಜ್ಯದ ಒಂದು ನಿಸರ್ಗ ಸಂಪತ್ತು ಮತ್ತು ಅರಣ್ಯ ಪ್ರಧೇಶ ಉಳಿಯಬೇಕು. ಸುಪ್ರೀಂ ಕೋರ್ಟಿನ ನ್ಯಾಯಾಧೀಶರೂ ಸಹ ಇದರ ಬಗ್ಗೆ ತೀರ್ಪು ಕೊಟ್ಟಿದ್ದಾರೆ ಈ ಅರಣ್ಯ ಪ್ರದೇಶವನ್ನು ನಾಶ ಮಾಡಬಾರದು ನಿಸರ್ಗ ಸಂಪತ್ತನ್ನು ನಾಶ ಮಾಡಬಾರದು ಎಂದು ಒಂದು ಕಡೆ ಇದೆ ಮತ್ತೊಂದು ಕಡೆ ತಾವು ಇವತ್ತು ಸುಲುಭವಾಗಿ ಹೇಳಿಕೆ ಕೊಡುತ್ತಿದ್ದೀರಿ. ಈ ದೇವಸ್ಥಾನಗಳು ಧರ್ಮದ ಹೆಸರಿನಲ್ಲಿವೆ. ಈ ರಾಜ್ಯದಲ್ಲಿ ಈ ವಿಚಾರದಲ್ಲಿ ಜನ ದಂಗೆ ಎದ್ದರೂ ಮಹದೇಶ್ವರ ಬೆಟ್ಟ ಮತ್ತು ಬಿಳಿಗಿರಿ ರಂಗನಾಥಸ್ವಾಮಿಯ ಭಕ್ತರು ಈ ರಾಜ್ಯದಲ್ಲಿ ಈ ರಾಷ್ಟ್ರದಲ್ಲಿ ಲಕ್ಷಾಂತರ ಜನ ಆನೇಕ ಕಡೆ ಇದ್ದಾರೆ. ಇದರ ಪರಿಸರವನ್ನು ನಾಶ ಮಾಡತಕ್ಕಂಥಾದ್ದಕ್ಕೆ ಅರಣ್ಯ ಇಲಾಖೆ ಅನುಮತಿ ಕೊಡುವುದಾದರೆ ಇಡೀ ರಾಜ್ಯದಲ್ಲಿ ದೊಡ್ಡ ದಂಗೆ ಆದೀತು. ಮತ್ತು ಯಾರಿಗಾದರೂ ಅನುಮತಿ ಕೊಡಬೇಕಾದರೆ ಅದಕ್ಕೆ ಕೇಂದ್ರದವರ ಅನುಮತಿಯಿಲ್ಲದೆ

ನಾವು ಯಾರಿಗೂ ಅನುಮತಿ ಕೊಡುವುದಕ್ಕಾಗುವುದಿಲ್ಲ ಎನ್ನತಕ್ಕ ಮಾತನ್ನು ಒಂದು ಕಡೆ ತಾವು ಹೇಳಿದ್ದೀರಿ. ಅದು ಹಿಂದೂ ಪತ್ರಿಕೆಯಲ್ಲಿ ಬಂದಿದೆ. ನೀವು ನೋ ಅಬ್ಜೆಕ್ಷನ್ ಸರ್ಟಿಫಿಕೇಟ್ ಕೊಡಬೇಕಾದರೆ ಅವರ ಪರ್ಮಿಷನ್ ತೆಗೆದುಕೊಳ್ಳಬೇಕು ಎಂದು ಹೇಳುತ್ತೀರಿ. ಈಗ ನೀವು ಕೇಸ್ ಎಷ್ಟು ಇದೆ ಈ ತಡೆ ಆಜ್ಞೆ ತೆಗೆಯುವುದಕ್ಕೆ ನೀವು ಏನು ಕ್ರಮ ತೆಗೆದು ಕೊಂಡಿದ್ದೀರಿ? ಮತ್ತು ಎರಡೂ ಪ್ರದೇಶಗಳಲ್ಲಿ ಯಾವುದೇ ಕಾರಣಕ್ಕಾಗಿ ಕಲ್ಲು ತೆಗೆದುಕೊಳ್ಳುವುದನ್ನು ನಿಲ್ಲಿಸುವುದಕ್ಕೆ ಏನು ಕ್ರಮವನ್ನು ತೆಗೆದುಕೊಳ್ಳುತ್ತೀರಿ ಎನ್ನುವುದನ್ನು ದಯಮಾಡಿ ತಾವು ತಿಳಿಸಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯ: ಮಾನ್ಯ ಉಪಾಧ್ಯಕ್ಷರೇ ಬಹಳ ಮುಖ್ಯವಾದಂತಹ ಈ ವಿಷಯವನ್ನು ಸರ್ಕಾರದವರ ಗಮನಕ್ಕೆ ತಂದಿರತಕ್ಕದ್ದು ಒಂದು ಉದ್ದೇಶದಿಂದ ಸದನದಲ್ಲಿ ಗ್ರಾನೈಟ್ ಕಲ್ಲಿನ ಲೂಟಿ ಬಗ್ಗೆ ರಾಜ್ಯದ ನಿಸರ್ಗ ಸಂಪತ್ತಿನ ಲೂಟಿಯ ಬಗ್ಗೆ ಮಾನ್ಯ ವಾಟಾಳ್ ನಾಗರಾಜ್ ಅವರು ಈಗಾಗಲೇ ಒಂದು ಖಾಸಗಿ ನಿರ್ಣಯವನ್ನು ತಂದು ಅದರ ಬಗ್ಗೆ ನಾವು ಸಕಾಷ್ಟು ಚರ್ಚೆಗಳನ್ನು ಮಾಡುತ್ತಿದ್ದೇವೆ. ಆದರೆ ದುರ್ದೈವ ಅಂದರೆ ಸರ್ಕಾರ ಇದನ್ನು ತೀವ್ರವಾಗಿ ಪರಿಗಣಿಸದೇ ಇರತಕ್ಕದ್ದು ಬಹಳ ಖಂಡನೀಯ ಎಂದು ನಾನು ಈ ಸಂದರ್ಬದಲ್ಲಿ ಹೇಳಬೇಕಾಗುತ್ತದೆ. ಈ ವಿಷಯ ಇಷ್ಟೆಲ್ಲಾ ಪ್ರಸ್ತಾಪ ಆದ ಮೇಲೂ ಅರಣ್ಯ ಇಲಾಖೆಯ ಮಾನ್ಯ ಮಂತ್ರಿಗಳು ಗಣಿ ಇಲಾಖೆಯ ಮಾನ್ಯ ಮಂತ್ರಿಗಳು ನಾನು ಹೋಸದಾಗಿ ಅವರು ಸಚಿವ ಸಂಪುಟಕ್ಕೆ ಸೇರಿದ್ದಾರೆ. ಎಂದು ಅವರ ಬಗ್ಗೆ ನಾನು ಆಪಾದನೆ ಮಾಡುವುದಕ್ಕೆ. ತಯಾರು ಇಲ್ಲ. ಆದರೆ ಇದರ ಬಗ್ಗೆ ಸರ್ಕಾರ ಎಷ್ಟೊಂದು ಮುತುವರ್ಜಿಯನ್ನು ವಹಿಸಿ ಕ್ರಮ ತೆಗೆದುಕೊಳ್ಳಬೇಕಾಗಿತ್ತೋ ಆ ಕ್ರಮ ತೆಗೆದುಕೊಳ್ಳುತ್ತಿಲ್ಲ. ಎನ್ನತಕ್ಕ ಆಪಾದನೆಯನ್ನು ಈ ಸಂದರ್ಭದಲ್ಲಿ ಮಾಡಬೇಕಾಗುತ್ತದೆ. ನೀವು ಮೂಕಾರಾಗಿ ಇರತಕ್ಕ ಒಂದು ಪ್ರಸಂಗ ಬಂದಿದೆ ಎಂದು ನಾನು ತಿಳಿದುಕೊಂಡಿದ್ದೇನೆ.ಈಗ ಸಚಿವರ ಹೇಳಿಕೆ ಏನಿದೆ ಅದರ ಬಗ್ಗೆ ಸ್ಪಷ್ಟನೆಗಳನ್ನು ಕೇಳುವುದಕ್ಕೆ ಹೋದರೆ ನಿಮಗೆ ವಿವರಗಳನ್ನು ಕೊಡುವುದಕ್ಕೆ ಸಾಧ್ಯವಿಲ್ಲ. ಇದರಲ್ಲಿ ರಾಜಕೀಯ ಬೆರೆಸಲು ನಾನು ತಯಾರಿಲ್ಲ. ನಿಮ್ಮಿಂದ ಒಂದೇ ಉತ್ತರ ನಿರೀಕ್ಷೆ ಮಾಡುವುದು. ಈ ಗ್ರಾನೈಟ್ ಕ್ವಾರಿ ಕೆಲಸ ಏನಿದೆ ಇದು ಅರಣ್ಯ ಪ್ರದೇಶದಲ್ಲಿ ಆಗುತ್ತಿದೆ. ಇದನ್ನು ನಿಲ್ಲಸಲು ಸಹಾಯವಾಗುವಂತೆ ನೀವು ಪ್ರಶ್ನೆ ಹಾಕಿ ಎಂದು ನಿಮ್ಮ ಸಚಿವ ಸಂಪುಟದ ಸದಸ್ಯರೊಬ್ಬರು ನನಗೆ ಕೇಳಿದರು ಇದು ಅರಣ್ಯಪ್ರದೇಶದಲ್ಲಿ ಆಗುತ್ತಿದೆ ಇದನ್ನು ನಾನು ನಿಲ್ಲಸಿ ಬಿಡುತ್ತೇನೆ. ನೀವು ಕೇಳಿ ಎಂದು ಹೇಳಿದರು. ಇದು ಅರಣ್ಯ ಪ್ರದೇಶದಲ್ಲಿ ಇನ್ನೂ ಜಾಸ್ತಿಯಾಗುತ್ತಿದೆ ಇದರಿಂದ ನಾನು ಏನು ಹೇಳಬೇಕಾಗುತ್ತದೆ ಎಂದರೆ ಇದರಲ್ಲಿ ನಿಮ್ಮ ಶಾಮೀಲು ಇದೆ ಎಂದು ಹೇಳಬೇಕಾಗುತ್ತದೆ. ನೀವು ಇದು ಚಾಮರಾಜನಗರದಲ್ಲಿ ಸೀಮೀತವಾಗಿದೆ ಎಂದಿದ್ದೀರಿ. ಹಾಗಿಲ್ಲ ಇಡೀ ರಾಜ್ಯದಲ್ಲಿ ಗ್ರಾನೈಟ್ ಕಲ್ಲಿನ ಸೂರೆ ಅವ್ಯಾಹತವಾಗಿ ನಡೆದಿದೆ ಒಂದಕ್ಕೆ ನೂರರಷ್ಟು ಹೆಚ್ಚಾಗಿದೆ. ನಿಮ್ಮ ಸರ್ಕಾರ ಇತ್ತಲ್ಲ ಆಗ ಏಕೆ ನಿಲ್ಲಿಸಲಿಲ್ಲ ಎಂದು ನೀವು ಕೇಳಬಹುದು ನಮ್ಮ ಕಾಲದಲ್ಲೂ ಇದು ನಡೆಯುತ್ತಿತ್ತು. ಸರ್ಕಾರಗಳು ಇದ್ದಾಗಲೂ ಈ ಕಳ್ಳರು ಇದ್ದೇ ಇದ್ದರು ಆದರೆ ಈಗ ಒಂದಕ್ಕೆ ನೂರರಷ್ಟು ಹೆಚ್ಚಾಗಿದೆ. ಒಂದು ಕಾಲದಲ್ಲಿ ಇದರ ವ್ಯವಹಾರ ನಡೆಯುತ್ತಿತ್ತು. ಪಟ್ಟಾ ಲ್ಯಾಂಡನ್ನು ಬೇರೆಯವರು ಕೊಂಡು ಇದನ್ನು ತೆಗೆದುಕೊಳ್ಳುತ್ತಿದ್ದರು. ಮಾನ್ಯ ಸಚಿವರಿಗೆ ಇದು ಗೊತ್ತಿದೆಯೋ ಇಲ್ಲವೋ ಗೊತ್ತಿಲ್ಲ. ಖಾಸಗಿ ಜಮೀನುಗಳಲ್ಲಿ ಕಲ್ಲಲ್ಲ ಅರಣ್ಯದ ಪಕ್ಕದಲ್ಲಿರುವ ಜಮೀನುಗಳನ್ನು ಖಾಸಗಿಯವರು ಕೊಂಡು ಅರಣ್ಯದೊಳಗಿರುವ ಗ್ರಾನೈಟನ್ನು ಸಾಗಿಸುತ್ತಿದ್ದಾರೆ. ನಿಮ್ಮ ಇಲಾಖೆಯವರು ಇನ್‌ಸ್ಪೆಕ್ಷನ್ ಹೋದಾಗ ಇಲ್ಲ ನೋಡಿ ನಾವು ಖಾಸಗಿ ಜಮೀನಿನಲ್ಲಿ ಮಾಡುತ್ತಿದ್ದೇವೆ. ಎಂದು ಹೇಳುತ್ತಾರೆ ಇದು ತುಮಕೂರು ಮೈಸೂರು ಬೆಂಗಳೂರು ಬಿಜಾಪುರ ರಾಯಚೂರು ಜಿಲ್ಲೆಗಳಲ್ಲಿ ಎಲ್ಲೆಲ್ಲಿ ಕಾಡು ಇದೆ ಅದರ ಪಕ್ಕದಲ್ಲಿರುವ ಜಮೀನನ್ನು ಖಾಸಗಿಯವರು ಕೊಂಡು ಮೋಸ ಮಾಡುತ್ತಿದ್ದಾರೆ.

ದಯವಿಟ್ಟು ನೀವು ಇಬ್ಬರು ಹೋಗಿ ನೋಡಿಕೊಂಡು ಬನ್ನಿ ಒಂದು ವರ್ಷದಿಂದ ನಾವು ಇಲ್ಲಿ ಹೇಳುತ್ತಿದ್ದೇವೆ. ಒಂದಕ್ಕೆ ನೂರರಷ್ಟು ಜಾಸ್ತಿಯಾಗಿದೆ ಇದುವರೆಗೂ ನೀವು ಏಕೆ ನೋಡಿ ಬರಲಿಲ್ಲ. ಅದಕ್ಕಾಗಿಯೇ ನೀವೂ ಶಾಮೀಲಾಗಿದ್ದೀರಿ ಎಂದು ನಾವು ಹೇಳುವುದು. ಈ ಹೇಳಿಕೆಯಿಂದ ನಮಗೆ ಏನೂ ಉಪಯೋಗವಾಗುವುದಿಲ್ಲ. ಬೇಕಾದರೆ ಒಂದು ಸದನದ ಸಮಿತಿ ಮಾಡಿ, ನಾವೂ ಬರುತ್ತೇವೆ. ಯಾರು ಶಾಮೀಲಾಗಿದ್ದಾರೊ ನೋಡೋಣ ಏಕೆಂದರೆ ಮೊನ್ನೆ ಯಾರೋ ಒಬ್ಬರು ಕನಕಪುರದಲ್ಲಿ ಭಾಷಣ ಮಾಡುತ್ತಿದ್ದರಂತೆ ಸಿಂಧ್ಯ ಅವರೂ ಕೂಡ ಇದರಲ್ಲಿ ಶಾಮೀಲಾಗಿದ್ದಾರೆ. ಅದಕ್ಕೊಸ್ಕರವೇ ಮಾಟಾಳ್ ನಾಗರಾಜ್ ಸಿಂಧ್ಯ ಅವರು ಇದರ ಬಗ್ಗೆ ಬಹಳ ದೊಡ್ಡದಾಗಿ ಭಾಷಣ ಮಾಡುತ್ತಿದ್ದಾರೆಂದು ಹೇಳಿದರಂತೆ ಅದಕ್ಕೋಸ್ಕರ ಒಂದು ಸಚಿವರ ಸಮಿತಿ ಮಾಡಿ ಎಲ್ಲ ಹೊರಗಡೆ ಬರಲಿ. ಮಾನ್ಯ ಮೊಯ್ಲಿಯವರು ಸರ್ಕಾರದ ಹಿರಿಯ ಸಚಿವರು. ಹೇಳುತ್ತಿದ್ದೇನೆ. ಇದರಿಂದ ಬಹಳ ಕೆಟ್ಟ ಹೆಸರು ಬರುವುದರ ಜೊತೆಗೆ ಅರಣ್ಯ ಸಂಪತ್ತು ಲೂಟಿಯಾಗುತ್ತಿದೆ. ಅಲ್ಲಿ ಬರೀ ಕಲ್ಲು ಹೋಗುತ್ತಿಲ್ಲ ಕಲ್ಲಿನ ನೆಪದಲ್ಲಿ ನೂರಾರು ವರ್ಷಗಳಿಂದ ಮರಗಳನ್ನು ಕಡಿಯುತ್ತಿದ್ದಾರೆ ಅದರ ಸಾಗಾಣಿಕೆಯಾಗುತ್ತಿದೆ. ಅಧಿಕಾರಿಗಳು ನಾವು ಏನೂ ಮಾಡುವುದಕ್ಕೆ ಆಗುತ್ತಿಲ್ಲ ಎಂದು ಹೇಳುತ್ತಿದ್ದಾರೆ ತಾವು ಹೇಳಿಕೆಯಲ್ಲಿ ಬರೀ 16 ಜನ ಗುತ್ತಿಗೆದಾರರಿದ್ದಾರೆ, ಅವರಿಗೆ ಮಾತ್ರ ಪರ್ಮಿಟ್ ಕೊಟ್ಟಿದ್ದೇವೆಂದು ಹೇಳಿದ್ದೀರಿ. ಒಂದು ಏರಿಯಾ ಇದೆ ಆದರೆ ಅವರು ಆ ಏರಿಯಾದಲ್ಲಿ ಮಾಡುತ್ತಿಲ್ಲ ಇದು ಬಹಳ ಮುಖ್ಯವಾಗಿರತಕ್ಕ ಅಂಶ ಅವರು ಈ ಏರಿಯಾ ಬಿಟ್ಟು ಹೊರಗಡೆ ಮಾಡುತ್ತಿದ್ದಾರೆ. ಸದನದ ಸಮಿತಿ ಮಾಡಿ ನಾವು ಬರುತ್ತೇವೆ ಹೋಗಿ ನೋಡೋಣ ಇದಕ್ಕೆ ಒಂದು ದಾರಿ ಕಂಡುಹಿಡಿಯೋಣ. ಇದನ್ನು ಮಾಡಲಿಕ್ಕೆ ಸಾಧ್ಯವಿಲ್ಲವೆಂದು ನಾನು ಕೇಳುವುದು?

ಪ್ರೊ ಎಂ.ಡಿ. ನಂಜುಂಡಸ್ವಾಮಿ: ಈ 9ನೇ ಶಾಸನಸಭೆ ಪ್ರಾರಂಭವಾದಾಗಿನಿಂದ ಈ ವಿಷಯ ಚರ್ಚೆಯಾಗುತ್ತಿದೆ ಇದರ ಬಗ್ಗೆ ಬಹಳಷ್ಟು ವಿಚಾರಗಳನ್ನು ಬಹಳ ಜನ ಸದಸ್ಯರು ಮಾತನಾಡಿದ್ದಾರೆ ಆದ್ದರಿಂದ ನಾನು ಹೆಚ್ಚಿಗೆ ಮಾತನಾಡುವುದಿಲ್ಲ. ಸರ್ಕಾರವನ್ನು ನಾನು ನೇರವಾಗಿ ಒಂದು ಪ್ರಶ್ನೆ ಕೇಳುತ್ತೇನೆ. ಈ ನೈಸರ್ಗಿಕ ಸಂಪತ್ತಿನ ಬಗ್ಗೆ ನಿಮ್ಮ ಇವತ್ತಿನ ಧೋರಣೆ ಏನಿದೆ ಅದನ್ನು ಬದಲಾವಣೆ ಮಾಡಿಕೊಳ್ಳುತ್ತೀರಾ? ಇಂದಿನ ನಿಮ್ಮ ಧೋರಣೆ ಪ್ರಕಾರ ನೈಸರ್ಗಿಕ ಸಂಪತ್ತು ಖಾಸಗಿ ವ್ಯಕ್ತಿಗಳ ಸ್ವತ್ತಾಗುವಂತಹ ಒಂದು ವ್ಯವಸ್ಥೆಯನ್ನು ಇಟ್ಟಿದ್ದೀರಿ ಅದನ್ನು ಬಿಟ್ಟು ಕರ್ನಾಟಕ ರಾಜ್ಯದ ನೈಸರ್ಗಿಕ ಸಂಪತ್ತು ಇಡೀ ಕರ್ನಾಟಕದ ಜನತೆಯ ಸ್ವತ್ತು ಎನ್ನುವಂತಹ ನಿಲುವನ್ನು ತೆಗೆದುಕೊಳ್ಳಲು ತಾವು ತಯಾರಾಗಿದ್ದೀರಾ? ಈ ನಿಲುವಿಗೆ ನೀವು ಬರದೇ ಇದ್ದರೆ ಇವತ್ತು ನಿಸರ್ಗ ಸಂಪತ್ತಿನ ಲೂಟಿ ನಿಸರ್ಗ ಸಂಪತ್ತಿನ ನಾಶವಾಗುತ್ತಿದೆ ಎಂದು ಏನು ಚರ್ಚೆ ಮಾಡುತ್ತಿದ್ದೇವೆ ಅದನ್ನು ನಿಲ್ಲಿಸಲಾಗುವುದಿಲ್ಲ. ನೈಸರ್ಗಿಕ ಸಂಪತ್ತಿನ ಬಗ್ಗೆ ಸರ್ಕಾರದ ವತಿಯಿಂದ ಈ ಅಧಿವೇಶನದಲ್ಲಿ ಮಾತುಗಳು ಬಂದಿವೆ ರಾಜ್ಯಪಾಲರ ಮೂಲಕ ಹಾಗೂ ಮುಖ್ಯಮಂತ್ರಿಗಳ ಬಜೆಟ್ ಮೂಲಕ ಮಾತುಗಳು ಬಂದಿವೆ. ಈಗಿನ ಕಾನೂನಿನ ವ್ಯವಸ್ಥೆಯನ್ನಿಟ್ಟುಕೊಂಡು ನಿಸರ್ಗ ಸಂಪತ್ತಿನ ಸಮರ್ಪಕ ಬಳಕೆ ಮಾಡುತ್ತೀರಾ ಅಥವಾ ನಿಸರ್ಗ ಸಂಪತ್ತಿನ ಸಾಮಾಜೀಕರಣದಿಂದ ಅದನ್ನು ಸಮರ್ಪಕವಾಗಿ ಬಳಕೆ ಮಾಡುತ್ತೀರಾ ಈ ನಿಲುವನ್ನು ತಾವು ಬದಲಾವಣೆ ಮಾಡಿಕೊಳ್ಳದಿದ್ದರೆ ಸಿಂಧ್ಯ ಅವರು ಮಾಡಿದಂತಹ ಆರೋಪವನ್ನೇ ನಾನು ತಮ್ಮ ಸರ್ಕಾರದ ಮೇಲೆ ಮಾಡಬೇಕಾಗುತ್ತದೆ. ಇದನ್ನು ಮಾಡದೆ ತಾವು ಸುಮ್ಮನೆ ಅರಣ್ಯ ಶಾಶ್ವತ ನಮಗೆ ಹೇಳುವುದಕ್ಕೆ ನಿತ್ಯ ಹರಿದ್ವರ್ಣದ ಕಾಡುಗಳು ಅರೆನಿತ್ಯ ಕಾಡುಗಳು ಮತ್ತು ತೇವಾಂಶದಿಂದ ಕೂಡಿದಂತಹ ಡೆಸಿಡಯಸ್ ಕಾಡುಗಳು ಎಂದು ಹೇಳಿದ್ದೀರಿ. ಈ ಕಾಡುಗಳೆಲ್ಲ ನಮಗೆ ಗೊತ್ತಿಲ್ಲವೆಂದಲ್ಲ. ಈ ಕೂದಲು ಸೀಳುವಂತಹ ಚರ್ಚೆ ಮೂಲಕ ಇವರು ನಿಸರ್ಗ ಸಂಪತ್ತಿನ ಲೂಟಿ ಮಾಡುವವರು ಯಾರಿದ್ದಾರೆ ಅವರ

ಜೊತೆ ಶಾಮೀಲಾಗುವಂತಹ ಒಂದು ಪ್ರಯತ್ನ ಎಂಬ ಗುಮಾನಿ ನಮಗೆ ಬರುತ್ತಿದೆ. ಆ ಕಾರಣಕ್ಕಾಗಿ ಇವತ್ತು ತಾವು ತೀರ್ಮಾನ ಮಾಡಬೇಕು. ಈ ರಾಜ್ಯದ ನೈಸರ್ಗಿಕ ಸಂಪತ್ತು ಈ ರಾಜ್ಯದ ಜನರ ಸ್ವತ್ತು ಎನ್ನುವ ಕಾನೂನಿನ ವ್ಯವಸ್ಥೆಗೆ ತಾವು ಬರುತ್ತೀರಾ ಅದಕ್ಕೆ ಬರದಿದ್ದರೆ ಏನು ಈಗ ಲೂಟಿಯಾಗುತ್ತಿದೆ ಅದನ್ನು ನಿಲ್ಲಿಸಲು ಆಗುವುದಿಲ್ಲ. ನ್ಯಾಯಾಲಯಗಳು ತಡೆಯಾಜ್ಞೆ ನೀಡುತ್ತವೆ ಎಂದು ನೆಪ ತೋರಿಸುತ್ತೀರಿ ಈ ಸರ್ಕಾರವಷ್ಟೆ ಅಲ್ಲ ಹಿಂದಿದ್ದ ಸರ್ಕಾರವೂ ಅದೇ ಕೆಲಸ ಮಾಡಿತ್ತು. ಅದಕ್ಕೆ ನನಗೆ ಹೊಳೆದಿರುವುದು ಎರಡು ಮಾರ್ಗಗಳು ಉಪಸಭಾಧ್ಯಕ್ಷೀಣಿಯವರೇ ನಾನು ಸದನದಲ್ಲಿ ಎಲ್ಲ ಸದಸ್ಯರಿಗೂ ಒಂದು ಸಲಹೆ ಮಾಡುತ್ತೇನೆ. ಗುಲ್ಬರ್ಗ ಬಿಜಾಪುರ ಹೀಗೆ ಎಲ್ಲೆಲ್ಲಿ ನೈಸರ್ಗಿಕ ಸಂಪತ್ತು ಜಾಸ್ತಿ ಇದೆಯೆಂದು ಈ ಸಾರಿಯ ಉಗಾದಿ ಸಂಚಿಕೆ ತೆಗೆದು ನೋಡಬೇಕು ಹೈದರಾಬಾದ್ ಕರ್ನಾಟಕದ ನೈಸರ್ಗಿಕ ಸಂಪತ್ತು ಎಷ್ಟಿದೆ ಎಂಬ ವಿವರಗಳು ಅದರಲ್ಲಿದೆ ಹೈದರಾಬಾದ್ ಅಭಿವೃದ್ಧಿ ಮಂಡಲಿ ಮಾಡಿ 40 ಕೋಟಿ ಕೊಟ್ಟಿವೆಂದು ಹೇಳುವ ಅವಶ್ಯಕತೆ ಇರಲಿಲ್ಲ.

ಉಪಾಧ್ಯಕ್ಷರು: ಸಚಿವರು ಮಾಡಿರುವ ಸ್ಟೇಟ್‌ಮೆಂಟ್ ಬಗ್ಗೆ ಏನಾದರೂ ಹೇಳಿ

ಪ್ರೊ ಎಂ.ಡಿ. ನಂಜುಂಡಸ್ವಾಮಿ: ನಾನು ಇಲ್ಲೇ ಇರುವ ಮಾನ್ಯ ಸಂಸದೀಯ ಸಚಿವರನ್ನು ವಿನಂತಿ ಮಾಡಿಕೊಳ್ಳುತ್ತೇನೆ. ನಾನು ಬಹಳ ಮುಖ್ಯವಾದ ವಿಚಾರ ಮಾತಾಡುತ್ತಿರುವುದರಿಂದ ಈ ಕಾಲ್ ಅಟೆನ್‌ಷನ್ ಮೋಷನಿಗಿರುವ ಒಂದು ಕಾಲಾಮಿತಿಯನ್ನು ನನಗೆ ಹಾಕಬಾರದೆಂದು ವಿನಂತಿ ಮಾಡಿಕೊಳ್ಳುತ್ತಿದ್ದೇನೆ? ತಾವು ನನ್ನ ಪರವಾಗಿ ಸಭಾಧ್ಯಕ್ಷೀಣಿಯವರಿಗೆ ಹೇಳಬೇಕು. ಇದನ್ನು ಏಕೆ ಹೇಳುತ್ತಿದ್ದೇನೆ. ಎಂದರೆ ನಾನು ಎಲ್ಲ ಸದಸ್ಯರಿಗೂ ವಿನಂತಿ ಮಾಡುವುದಕ್ಕೆ ಹೈಕೋರ್ಟಿನ ತಡೆಯಾಜ್ಞೆ ಇದೆಯೆಂದು ಸರ್ಕಾರಗಳು ನೆಪ ಹಾಕುತ್ತಿವೆ. ಅದಕ್ಕೆ ಈ ದೇಶದಲ್ಲೇ ಯಾರೂ ಮಾಡಿರದಂತಹ ವಿಧಾನ ಉಪಯೋಗಿಸಿ ಈ ಸದನ ಮಾಡಬಹುದು. ತಾವೆಲ್ಲರೂ ಒಪ್ಪುವುದಾದರೆ ನಾವೆಲ್ಲ ಒಂದು ಸರ್ವಾನುಮತದ ನಿರ್ಣಯ ಮಾಡಿ ಈ ನ್ಯಾಯಾಲಯಗಳಿಗೆ ಕಳುಹಿಸಿಕೊಡೋಣ ರಾಜ್ಯದಲ್ಲಿರುವ ನೈಸರ್ಗಿಕ ಸಂಪತ್ತಿನ ಬಗ್ಗೆ ಒಂದು ಹೊಸ ನಿಲುವನ್ನು ಕರ್ನಾಟಕ ರಾಜ್ಯದ ಶಾಸನಸಭೆ ತೆಗೆದುಕೊಳ್ಳುತ್ತಿದೆ. ಕರ್ನಾಟಕದ ನೈಸರ್ಗಿಕ ಸಂಪತ್ತು ಕರ್ನಾಟಕದ ಜನತೆಯ ಸ್ವತ್ತು ಎಂಬ ತೀರ್ಮಾನಕ್ಕೆ ಬಂದಿದೆ. ಇದನ್ನು ಮನಸ್ಸಿನಲ್ಲಿ ಇಟ್ಟುಕೊಂಡು ತಾವು, ನ್ಯಾಯಾಲಯ ಕೆಲಸವನ್ನು ಮಾಡಬೇಕು ಎಂದು ನಾವು ನಿರ್ಣಯ ಮಾಡಿ ನ್ಯಾಯಾಲಯಕ್ಕೆ ಕಳುಹಿಸಿಕೊಡೋಣ. ಆಮೇಲೆ ಏನು ಮಾಡುತ್ತಾರೊ ನೋಡೋಣ. ಇದನ್ನು ಮಾಡುವುದಕ್ಕೆ ಸರ್ಕಾರ ತಯಾರಿದೆಯೇ? ಇದನ್ನು ನೀವು ಮಾಡಲಿಲ್ಲ ಎಂದರೆ ನಾನು ಇವತ್ತು ಮತ್ತೆ ಇಲ್ಲಿ ಹೇಳುತ್ತಿದ್ದೇನೆ, ಈಗಾಗಲೇ ಒಂದು ಸಾರಿ ಹೇಳಿದ್ದೆ. ಈ ನೈಸರ್ಗಿಕ ಸಂಪತ್ತಿನ ರಾಷ್ಟ್ರೀಕರಣವನ್ನು ರೈತಸಂಘ ಮಾಡುತ್ತದೆ, ಕರ್ನಾಟಕ ರಾಜ್ಯದ ಜನ ಮಾಡುತ್ತಾರೆ ಎಂದು ಹೇಳಿದ್ದೆ. ಆ ಎಚ್ಚರಿಕೆಯನ್ನು ನಾನು ಇಲ್ಲಿ ಕೊಟ್ಟು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಉಪಾಧ್ಯಕ್ಷರೆ, ಈಗಾಗಲೇ ನನ್ನ ಸ್ನೇಹಿತರು ಇದರ ಬಗ್ಗೆ ಸಾಕಷ್ಟು ಬೆಳಕನ್ನು ಚೆಲ್ಲಿದ್ದಾರೆ. ಈ ನೈಸರ್ಗಿಕ ಸಂಪತ್ತಿನ ನಾಶ ಮತ್ತು ಗ್ರಾನೈಟ್ ಲೂಟಿಯ ಬಗ್ಗೆ ಬೀದಿಯಲ್ಲಿ ಚರ್ಚೆ ನಡೆಯುತ್ತಿದೆ. ಈಗಾಗಲೇ ನಮ್ಮ ಸಿಂಧ್ಯಾರವರು ಹೇಳಿದ ಹಾಗೆ, ಇದು ನಮ್ಮ ಸರ್ಕಾರ ಇದ್ದಾಗಲೂ ಇತ್ತು. ಆದರೆ ಈಗ ಯಾವ ಪ್ರಮಾಣದಲ್ಲಿ ಮುಟ್ಟಿದೆ ಎಂದರೆ ಅದು ಗಗನಕ್ಕೆ ಹೋಗಿಮುಟ್ಟಿದೆ. ಮಾನ್ಯ ಸಚಿವರಿಗೆ ನಾನು ಎರಡು ಪ್ರಶ್ನೆಗಳನ್ನು ಕೇಳುವುದಕ್ಕೆ ಬಯಸುತ್ತೇನೆ. ಒಂದನೆಯ ಪ್ರಶ್ನೆಯೆಂದರೆ 1987ನೇ ಇಸವಿಯಲ್ಲಿ ಸುಪ್ರೀಂಕೋರ್ಟ್‌ನಿಂದ ಸ್ಟೇ ತಂದರು. ಇವತ್ತಿಗೆ ನಾಲ್ಕು ವರ್ಷ ಆಯಿತು. ಈ

ನಾಲ್ಕು ವರ್ಷದಲ್ಲಿ ಸ್ಟೇಯನ್ನು ವೆಕೇಟ್ ಮಾಡಿಕೊಳ್ಳುವುದಕ್ಕೆ ಆಗಿಲ್ಲ. ಅದರ ಕಾರಣಗಳೇನು? ಇದಕ್ಕಾಗಿ ಸರ್ಕಾರದಿಂದ ಏನು ಪ್ರಯತ್ನ ಆಗಿದೆ? ಎರಡನೆಯದು, ನೀವು ಒಂದು ತಿದ್ದುಪಡಿಯನ್ನು ತಂದು ಖಾಸಗಿಯ ಜನರಿಗೆ ಒಂದು ಅವಕಾಶವನ್ನು ಮಾಡಿಕೊಡಬೇಕು ಎಂದು ಕಾನೂನನ್ನು ಜಾರಿಯಲ್ಲಿ ತಂದಿರಿ. ಅದರಿಂದ ಫ್ಲಡ್‌ಗೇಟ್ ಓಪನ್ ಮಾಡಿದಂತೆ ಆಯಿತು. ಇವತ್ತು ನಾನು ಕೇಳುತ್ತೇನೆ, ಸುಪ್ರೀಂ ಕೋರ್ಟ್‌ನಲ್ಲಿ ನೀವು ಏನು ವಾದವನ್ನು ಮಾಡುತ್ತೀರಿ? ಯಾವ ಜನರು ಹೋಗಿ ಸ್ಟೇಯನ್ನು ತೆಗೆದುಕೊಂಡು ಬಂದಿದ್ದಾರೆ, ಆ ಖಾಸಗಿ ಜನರಿಗೆ ಅಂದರೆ Already Government has agreed to encourage the private people.

ಇದರ ಬಗ್ಗೆ ನಿಮ್ಮ ವಾದ ಏನು? ಮೂರನೆಯದು, ನನಗೆ ಬಂದ ಇನ್‌ಫರ್ಮೇಷನ್ ಪ್ರಕಾರ, ಈಗಾಗಲೇ ಯಾವ 16-20 ಜನ ಅಲ್ಲಿ ಗ್ರಾನೈಟ್ ಎಕ್ಸ್‌ಪ್ಲಾಯ್ಟ್ ಮಾಡುತ್ತಿದ್ದಾರೆ, ಅವರಲ್ಲಿ ವೀರಪ್ಪನ್ ಹೆಸರಿನಲ್ಲಿ ಬೇನಾಮಿ ಮಾಡುತ್ತಿದ್ದಾರೆ ಎಂದು ಸುದ್ದಿ ಬಂದಿದೆ.

ಇದರ ಬಗ್ಗೆ ತಮಗೆ ಸುದ್ದಿಯೇನಾದರೂ ಬಂದಿದೆಯೇ? ಮತ್ತು ಸುಪ್ರೀಂ ಕೋರ್ಟ್‌ನಲ್ಲಿ ಸ್ಟೇ ಇದ್ದರೂ ಸಹಾ ಯಾವುದೇ ಫಾರೆಸ್ಟ್ ಪ್ರೊಡ್ಯೂಸ್ ಆಗಲಿ, ಗ್ರಾನೈಟ್ ಆಗಲಿ ಅದು ಮೂವ್ ಆಗಬೇಕಾದರೆ ಇದಕ್ಕೆ ನಿಮ್ಮ ಇಲಾಖೆಯ ಒಂದು ಪಾಸ್ ಬೇಕು. ಆ ಪಾಸನ್ನು ಕೊಡುವಾಗ ಸಾಕಷ್ಟು ಸಮಸ್ಯೆಯನ್ನು ನೀವು ನಿರ್ಮಾಣ ಮಾಡುವುದಕ್ಕೆ ಆಗುತ್ತಿತ್ತು. ನಿಜವಾಗಿ ಗೌರ್ಮೆಂಟ್‌ನಲ್ಲಿ ವಿಲ್ ಇದ್ದರೆ, ಗ್ರಾನೈಟ್ ಎಕ್ಸ್‌ಪ್ಲಾಯ್ಟ್ ಆಗಬಾರದು, ಇದನ್ನು ಮಿಸ್‌ಯೂಸ್ ಮಾಡುತ್ತಿದ್ದಾರೆ ಎಂದು ಹೇಳಿ ತಾವು ಸುಪ್ರೀಂ ಕೋರ್ಟ್‌ನ ಸ್ಟೇ ಇದ್ದರೂ ಸಹಾ ಈ ಜನರ ಮೇಲೆ ಹಿಡಿತ ಇಟ್ಟುಕೊಳ್ಳಬಹುದು. ನಿಮ್ಮ ಫಾರೆಸ್ಟ್ ಆಕ್ಟ್ ಲಿಸ್ಟ್‌ಗಳು ಲಾಂಗ್ ಇವೆ, ಇವತ್ತು ಇಡೀ ಜನರು ಸಫರ್ ಆಗುತ್ತಿದ್ದಾರೆ. ಆದರೆ ಸ್ಮಗ್ಲರ್ಸ್, ಕಳ್ಳರು ಡೇ ಅಂಡ್ ನೈಟ್ ರಾಬರಿಯನ್ನು ಮಾಡುತ್ತಿದ್ದಾರೆ. ಅದರ ಸಲುವಾಗಿ ಪಾಸನ್ನು ಕೊಡುವಾಗ ತಾವು ಸಾಕಷ್ಟು ಹಿಡಿತವನ್ನು ಇಡುವುದಕ್ಕೆ ಸಾಧ್ಯವಾಗುತ್ತಿತ್ತು. ಆದರೆ ಅದನ್ನು ತಾವು ಮಾಡುತ್ತಿಲ್ಲ. ಇವತ್ತು ಗ್ರಾನೈಟ್ ಮತ್ತು ಫಾರೆಸ್ಟ್ ಪ್ರೊಡ್ಯೂಸ್ ಬಹಳ ದೊಡ್ಡ ಪ್ರಮಾಣದಲ್ಲಿ ಸ್ಮಗ್ಲಿಂಗ್ ಆಗುತ್ತಿದೆ. ಏಕೆಂದರೆ, ನಿಮ್ಮ ಅಧಿಕಾರಿಗಳೆಲ್ಲರಲ್ಲಿಯೂ ಮಾರಲ್ ಹೋಗಿಬಿಟ್ಟಿದೆ. ಏಕೆಂದರೆ, ಮೂರು-ಮೂರು ತಿಂಗಳು ಇದ್ದ ಜಾಗದಲ್ಲಿ ಇರುವುದಿಲ್ಲ. ಅವರನ್ನು ಇವತ್ತು ಒಂದು ಕಡೆಯಲ್ಲಿ ಪೋಸ್ಟ್ ಮಾಡಿ ಮತ್ತೆ ಮೂರು ತಿಂಗಳಲ್ಲಿಯೇ ಅವರನ್ನು ಅಲ್ಲಿಂದ ತೆಗೆದು ಬಿಡುತ್ತೀರಿ. ಇದರ ಸಲುವಾಗಿ ಮುಂಚಿತವಾಗಿ ಅಧಿಕಾರಿಗಳಲ್ಲಿ ಮಾರಲ್ ಇರಬೇಕು. ಅಧಿಕಾರಿಗಳಲ್ಲಿ ಮಾರಲ್ ಇಲ್ಲ. ಅದನ್ನು ತರುವುದಕ್ಕೆ ಮೊದಲು ಪ್ರಯತ್ನವನ್ನು ಮಾಡಿ. ಮತ್ತು ತಾವು ಯಾವ ಪ್ರಕಾರ ಕ್ರಮ ತೆಗೆದುಕೊಳ್ಳುತ್ತಿದ್ದೀರಿ ಎನ್ನುವುದನ್ನು ಸ್ಪಷ್ಟಪಡಿಸಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಇ.ಟಿ. ಶಂಭುನಾಥ್ (ಅರಣ್ಯ ಸಚಿವರು) : ಮಾನ್ಯ ಸಭಾಧ್ಯಕ್ಷೆಯವರೇ ಮಾನ್ಯ ಸದಸ್ಯರೆಲ್ಲರ ಕಳಕಳಿಯೂ ಸರ್ಕಾರದ ಗಮನಕ್ಕೆ ಬಂದಿದೆ. ಇದರಿಂದ ಸರ್ಕಾರಕ್ಕೆ ಸಾಕಷ್ಟು ನಷ್ಟ ಆಗುತ್ತಿದೆ ಎಂದು ಮಾನ್ಯ ವಿರೋಧ ಪಕ್ಷದ ನಾಯಕರು ಆಪಾದನೆಯನ್ನು ಮಾಡಿದ್ದಾರೆ. ಆದರೆ ಅರಣ್ಯ ಪ್ರದೇಶದಿಂದ ಹೋಗತಕ್ಕಂಥ ಗ್ರಾನೈಟ್ ಕಲ್ಲಿಗೆ ನಾವು ಬೇಕಾದಷ್ಟು ಸುಂಕವನ್ನು ವಸೂಲೂ ಮಾಡುತ್ತಿದ್ದೇವೆ. ಒಂದು ಹೆಕ್ಟೇರ್‌ಗೆ ಅಪ್ಪೋರ್‌ಸ್ಟೇಷನ್ ಛಾರ್ಜ್ ಎಂದು ಹೇಳಿ ಇಪ್ಪತ್ತು ಸಾವಿರ ರೂಪಾಯಿಗಳನ್ನು ವಸೂಲು ಮಾಡುತ್ತಿದ್ದೇವೆ. ಆಮೇಲೆ ಒಂದು ಎಕರೆಗೆ 250 ರೂಪಾಯಿಯಂತೆ ಪ್ರತಿವರ್ಷ ಗುತ್ತಿಗೆಯನ್ನು ತೆಗೆದುಕೊಳ್ಳುತ್ತಿದ್ದೇವೆ. ಆಮೇಲೆ ರಾಯಲ್ಟಿ ಎಂದು ಹೇಳಿ 600 ರೂಪಾಯಿಗಳನ್ನು ವಸೂಲೂ ಮಾಡುತ್ತಿದ್ದೇವೆ.

ಶ್ರೀ ಆರ್.ವಿ. ದೇಶಪಾಂಡೆ : ಅದನ್ನು ಎಲ್ಲಿಗೆ ಹಾಕಬೇಕು?

(ಗೊಂದಲ)

ಶ್ರೀ ಇ.ಟಿ. ಶಂಬುನಾಥ್ : ಅದನ್ನು ಯಾವ ಸರ್ಕಾರ ಇದ್ದರೂ ರಕ್ಷಣೆ ಮಾಡುವುದಕ್ಕೆ ಆಗುವುದಿಲ್ಲ, ಅಧಿಕಾರಿಗಳು ಅದನ್ನು ಮಾಡಬೇಕು. ನಾವು ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತಿದ್ದೇವೆ. ಈಗ ಸರ್ಕಾರದಲ್ಲಿ ಇರುವಂತೆ 25-5-90 ಕ್ಕೆ ಕರ್ನಾಟಕ ಮಿನರಲ್ಸ್‌ನವರು ತಿದ್ದುಪಡಿಯನ್ನು ತಂದಿದ್ದಾರೆ. ಅರಣ್ಯ ಇಲಾಖೆಯಿಂದ ತಿದ್ದುಪಡಿಯನ್ನು ತಂದಿಲ್ಲ. ಅರಣ್ಯ ಪ್ರದೇಶದಲ್ಲಿ ನಾವು ಅದನ್ನು ಆಲೊ ಮಾಡುವುದಿಲ್ಲ.

ನಾವು ಇದರ ಬಗ್ಗೆ ರಿಟ್‌ಪಿಟೀಷನ್ ಹಾಕಿದ್ದೇವೆ. ಮತ್ತು ಯಾರಿಗೂ ಎಂಟ್ರಿ ಬಠಬಾರದೆಂದು ಈಗ ಮಂಜೂರಾತಿ ಮಾಡಿ ಲೀಸಿಗೆ ಕಳುಹಿಸುತ್ತಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಈಗ ನಾನು ಕೇಳುತ್ತಿರುವುದು ಇಷ್ಟೆ. ಹೈಕೋರ್ಟಿನಿಂದ ಸ್ಟೇ ತೆಗೆದುಕೊಂಡು ಬಂದರು, ಸುಪ್ರೀಂ ಕೋರ್ಟಿನಿಂದ ಸ್ಟೇ ತೆಗೆದುಕೊಂಡು ಬಂದಿದ್ದಾರೆ; ಅದಕ್ಕೋಸ್ಕರ ಮಾಡುತ್ತೇವೆಂದು ಹೇಳಿದಿರಲ್ಲಾ, ಅದನ್ನು ಮಾಡಿಕೊಳ್ಳಿ. ಆದರೆ ಬೇರೆ ತಾಲ್ಲೂಕುಗಳಲ್ಲಿ ಆಗುತ್ತಿರುವುದನ್ನು ನಿಲ್ಲಿಸಿ.

ಶ್ರೀ ವಾಟಾಳ್ ನಾಗರಾಜ್ : ಈ ವಿಚಾರದಲ್ಲಿ ನೀವು ನಾವು ಒಂದು ತೀರ್ಮಾನಕ್ಕೆ ಬರೋಣ. ಈ ದಂಧೆಯನ್ನು ನಿಲ್ಲಿಸಬೇಕೆ, ಬೇಡವೇ ಬೇಡವೆಂದರೆ ಬೇಡ ಅಂತ ಹೇಳಿ, ಅದರ ಬಗ್ಗೆ ವಿಚಾರಕ್ಕೆ ಬರೋಣ.

ಶ್ರೀ ಇ.ಟಿ. ಶಂಭುನಾಥ್ : ಈ ದಂಧೆಯನ್ನು ನಿಲ್ಲಿಸುವ ಅಥವಾ ಬಿಡುವ ಬಗ್ಗೆ ಸರ್ಕಾರ ತೀರ್ಮಾನ ತೆಗೆದುಕೊಳ್ಳಬೇಕು. ಏಕೆಂದರೆ, ಅರಣ್ಯದಲ್ಲಿ ಆಗತಕ್ಕ ವ್ಯವಸ್ಥೆಯನ್ನು ನಾವು ನಿಲ್ಲಿಸಬೇಕಾಗುತ್ತದೆ. ಅರಣ್ಯದಲ್ಲಿ ಆಗಿರತಕ್ಕ ವ್ಯವಸ್ಥೆಯನ್ನು ನಿಲ್ಲಿಸಲಿಕ್ಕೆ ನಾವು ಎಲ್ಲಾ ಪ್ರಯತ್ನವನ್ನು ಮಾಡಿದ್ದೇವೆ. ಆದರೆ ಕ್ವಾರಿಲೀಸ್ ಮತ್ತು ಕ್ವಾರಿಪರ್ಮಿಟ್ ಎಂದು ಎರಡು ಇದೆ. ಕ್ವಾರಿಲೀಸ್ ಅಂತ ಏರಿಯಾ ಲೀಸ್ ಮಾಡತಕ್ಕದ್ದು, ಕ್ವಾರಿಪರ್ಮಿಟ್ ಅಂದರೆ ಕ್ವಾಂಟಿಟಿ ಮೇಲೆ ಪರ್ಮಿಟ್ ಕೊಡತಕ್ಕದ್ದು. ಕ್ವಾರಿಪರ್ಮಿಟ್‌ನಲ್ಲಿ ನೀವು ಹೇಳತಕ್ಕ 6 ಮೀಟರ್ ಡೆಪ್ತ್ ಕಂಟ್ರೋಲಿಂಗ್ ಬರುತ್ತದೆಯೇ ಹೊರತು It will not come under quarry lease. ಕ್ವಾರಿಲೀಸಿನ ಏಟಂನಲ್ಲಿ 6 ಮೀಟರ್ ಡೆಪ್ತ್ ಕಂಟ್ರೋಲ್ ಇಲ್ಲವೇ ಇಲ್ಲ. ಅದು ಕ್ವಾರಿಪರ್ಮಿಟ್ಟಿಗೆ ಇದೆ. ಆದರೆ ಎಲ್ಲ ಲೀಸರ್ಸ್ ಅಲ್ಲಿರುವುದು. ಆದ್ದರಿಂದ ಆ ಪ್ರಾಬ್ಲಮ್ ಉದ್ಭವಿಸುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ನಾವು ಧೈರ್ಯವಾಗಿ ನಿಲ್ಲಿಸುತ್ತೇವೆಂದು ಹೇಳಿ, ಇದರಲ್ಲಿ ಮುಚ್ಚುಮರೆ ಏನಿದೆ.

ಶ್ರೀ ಇ.ಟಿ. ಶಂಬುನಾಥ್ : ಕೋರ್ಟಿನಲ್ಲಿರತಕ್ಕ ಕೇಸುಗಳ ಬಗ್ಗೆ ನಾವು ಏನನ್ನೂ ಹೇಳಲಿಕ್ಕೆ ಆಗುವುದಿಲ್ಲ. 1987ರಲ್ಲಿ ಕೋರ್ಟಿಗೆ ಹೋದವರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೇವೆಂದರೆ...

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಈಗ ಹಗಲು ದರೋಡೆಯನ್ನು ನಿಲ್ಲಿಸುವುದಕ್ಕೆ ಸಚಿವ ಸಂಪುಟದ ಸಭೆಗೆ ತರಬೇಕು.

(ಗೊಂದಲ)

SRI D.B.CHANDRE GOWDA : The Lok Sabha is dissolved...
(INTERRUPTIONS)

ಶ್ರೀ ಬಿ.ಹೆಚ್. ಬನ್ನಿಕೋಡ್ : ಲೋಕಸಭೆ ವಿಸರ್ಜನೆಯಾಗಿದೆ.

(ಗೊಂದಲ)

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಮಾನ್ಯ ಉಪಾಧ್ಯಕ್ಷರೆ, ವಿರೋಧ ಪಕ್ಷದ ನಾಯಕರು ಲೋಕಸಭೆ ವಿಸರ್ಜನೆಯಾಯಿತು ಎಂದು ಹೇಳಿದರು. ತಾವೇನಾದರೂ ಹೇಳಿದರೆ ಅದನ್ನು ಒಪ್ಪುತ್ತೇವೆ. ಅವರು ಹೇಳಿದರೆ ಒಪ್ಪುವುದಕ್ಕಾಗುವುದಿಲ್ಲ.

ಶ್ರೀ ಇ.ಟಿ. ಶಂಭುನಾಥ್ : 1987ರಲ್ಲಿ ಸ್ಟೇ ತಂದವರ ಬಗ್ಗೆ 28-1-87, 15-12-87, 18-12-87, ರಲ್ಲಿ-ಹೀಗೆ 7ಸಾರಿ ನಾವು ರಿಮೈಂಡರ್ ಮಾಡಿದ್ದೇವೆ. ಲಾ ಸೆಕ್ರೆಟರಿಯವರಿಗೆ ಅದರ ಬಗ್ಗೆ ಕ್ರಮ ತೆಗೆದುಕೊಳ್ಳಿ ಎಂದು ಹೇಳಿದ್ದೇವೆ. ತಕ್ಷಣ ನಾವು ಮಾಡಿದ್ದೇವೆ.

SRI P.G.R.SINDHYA : Ridiculous on the part of the Government. The Mines & Geology Department is writing to the Law Department seven times and the Law Department not taking action, is it an answer that we expect from the Government, what difference it makes for us? You tell us, we will stop it which is done illegally. That assurance we want from the Government.

SRI R.V.DESHPANDE : It is clear that there is no co-ordination. There is lack of co-ordination.

ಶ್ರೀ ವಾಟಾಳ್ ನಾಗರಾಜ್ : ಇದು ಒಂದಕ್ಕೊಂದು ಸಂಬಂಧವಿಲ್ಲ.

(ಗೊಂದಲ)

ಉಪಾಧ್ಯಕ್ಷರು : ಮಂತ್ರಿಗಳು ಉತ್ತರವನ್ನು ಪೂರೈಸಲಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಈ ಮೋಸ, ಈ ದರೋಡೆ...

ಉಪಾಧ್ಯಕ್ಷರು : ಅವರು ಉತ್ತರವನ್ನು ಪೂರೈಸಲಿ.

(ಗೊಂದಲ)

SRI M.VEERAPPA MOILY : In so far as the health of this Hon. Minister is concerned, he is as good as a virgin forest. He is as good as a virgin forest.

SRI K.H.RANGANATH : He is a virgin forest, and also exploited forest.

(ಗೊಂದಲ)

ಶ್ರೀ ಎಂ. ವೀರಪ್ಪಮೊಯಿಲಿ : ಸನ್ಮಾನ್ಯ ಉಪಾಧ್ಯಕ್ಷಿಣಿಯವರೆ, ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ಅದರಲ್ಲಿ ಪ್ರಾಮುಖ್ಯವಾದಂಥ ಕೆಲವು ಅಂಶಗಳನ್ನು ಎತ್ತಿಹಿಡಿಯುವುದಕ್ಕೆ ನಾನು ಇಚ್ಛಿಪಡುತ್ತೇನೆ. ಏಕೆಂದರೆ, ಪ್ರಮುಖವಾಗಿ ಕೋರ್ಟಿನ ತಡೆಯಾಜ್ಞೆಯನ್ನು ನೆವವಾಗಿಟ್ಟುಕೊಂಡು ಈಗಲೂ ಕೂಡ ಆ ಗಣಿಗಳನ್ನು ತೆಗೆಯುವಂಥ ವ್ಯವಸ್ಥೆ ಮಾಡುತ್ತಿದ್ದಾರೆ. ಇದರ ಬಗ್ಗೆ ಹೈ ಕೋರ್ಟ್‌ಗಳಲ್ಲಿ ಬಹಳ ಸಮಯದಿಂದ ಸ್ಟೇ ಇದೆ. ಇದನ್ನು ವೆಕೇಟ್ ಮಾಡಿಸುವಂಥ ಪ್ರಯತ್ನವನ್ನು ನಾವು ಮಾಡುತ್ತಿದ್ದೇವೆ.

(ಗೊಂದಲ)

ಶ್ರೀ ಎಂ. ವೀರಪ್ಪಮೊಯಿಲಿ : ತಾವು ಹೇಳಿದ ಈ ಒಂದು ಮಾತನ್ನು ನಾನೂ ಒಪ್ಪುತ್ತೇನೆ. ಇದು ಅನೇಕ ಇಲಾಖೆಗಳಲ್ಲಿ ಸಂಯೋಜನೆ ಆಗ ಬೇಕಾಗಿದೆ. ಇದರಲ್ಲಿ ರೆವೆನ್ಯೂ ಇಲಾಖೆಯಿದೆ, ಅರಣ್ಯ ಇಲಾಖೆಯಿದೆ, ಕೋರ್ಟಿಗೆ ಸಂಬಂಧಿಸಿದಂತೆ

ಕಾನೂನು ಇಲಾಖೆಯಿದೆ. ಈ ಇಲಾಖೆಗಳಲ್ಲೆಲ್ಲಾ ಸರಿಯಾಗಿ ಸಂಯೋಜನೆ ಆಗಬೇಕಾಗಿದೆ. The Government will think of appointing a monitoring cell consisting of various departments. We will consider in the cabinet so that a high power monitoring cell will stop this kind of exploitation in the guise of the Court stay order or so many other pretexts.

ಇದನ್ನೆಲ್ಲ ನಿಲ್ಲಿಸುವುದಕ್ಕೆ ಸರ್ಕಾರ ಪ್ರಯತ್ನ ಮಾಡುತ್ತದೆ. We will appoint a high power monitoring cell. ಈಗ ಪೈ ಕೋರ್ಟ್ ಸ್ಟೇ ಇರಬಹುದು, ಅದನ್ನು ಯಾವ ರೀತಿ ವೆಕೇಟ್ ಮಾಡಿಸುವುದಕ್ಕೆ ಸಾಧ್ಯವಿದೆ ಎಂದು ನೋಡುತ್ತೇವೆ. ಕೆಲವು ಸಲ ಸರಿಯಾದಂಥ ಸ್ಟೇ ಕೂಡ ಇರುವುದಿಲ್ಲ. ಅದೇ ಸ್ಟೇಯನ್ನು ತೋರಿಸಿ ಅಧಿಕಾರಿಗಳನ್ನು ಎಕ್ಸ್‌ಪ್ಲಾಯಿಟ್ ಮಾಡುತ್ತಿದ್ದಾರೆ. ಇದು ವಕೀಲರಾದ ನಿಮಗೂ ನಮಗೂ ಗೊತ್ತಿದೆ. ಅರಣ್ಯದಲ್ಲಿ ಯಾವುದೇ ಗುತ್ತಿಗೆಯನ್ನು ಕೊಡಬಾರದೆಂದು ನಮ್ಮ ನೀತಿ ಇದೆ. ಆ ನೀತಿಯಲ್ಲಿ ಯಾವುದೇ ಚಂಚಲತೆಯಿಲ್ಲ. ಜಿಲ್ಲಾಧಿಕಾರಿಗಳಿಗೆ ಇದರ ಬಗ್ಗೆ ಬರುವಂಥ ಯಾವುದೇ ಅರ್ಜಿಯನ್ನೂ ಸ್ವೀಕಾರ ಮಾಡಬಾರದೆಂದು ಹೇಳಿದ್ದೇವೆ ಎಂದು ಮಾನ್ಯ ಸಚಿವರು ಹೇಳಿದ್ದಾರೆ. ಇದರಲ್ಲಿ ಸಡಿಲಿಕೆಯನ್ನು ತೋರಿಸುವಂಥ ಪ್ರಮೇಯ ನಮ್ಮ ಸರ್ಕಾರಕ್ಕೆ ಇಲ್ಲ. ನಾವು ಇದರ ಬಗ್ಗೆ ಏನು ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೇವೆ ಎಂದರೆ, ಇದರ ಬಗ್ಗೆ ಎಲ್ಲಾ ಇಲಾಖೆಗಳನ್ನು ಸಂಯೋಜಿಸಿ ಈ ಅಧಿವೇಶನ ಮುಗಿಯುವ ಮೊದಲು ಒಂದು ಹೇಳಿಕೆಯನ್ನು ಮಂಡಿಸುತ್ತೇವೆ.

ಪ್ರಕಟಣೆ

ಉಪಾಧ್ಯಕ್ಷರು : ಈಗ ಒಂದು ಪ್ರಕಟಣೆ ಇದೆ. ದಿನಾಂಕ 12ನೇ ಮಾರ್ಚಿ 1991ರಂದು ನಡೆದ ವಿಧಾನ ಸಭೆಯ ಕಾರ್ಯಕಲಾಪಗಳ ಸಲಹಾ ಸಮಿತಿಯು ಪ್ರಸಕ್ತ ಅಧಿವೇಶನದಲ್ಲಿ ಈ ಕೆಳಕಂಡಂತೆ ಕಲಾಪಗಳನ್ನು ನಡೆಸಲು ತಿರ್ಮಾನಿಸಿದೆ. 13ನೇ ಹಾಗೂ 14ನೇ ಮಾರ್ಚಿ 1991ರಂದು ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣೆ ಪ್ರಸ್ತಾವದ ಮೇಲಿನ ಚರ್ಚೆ. ೧೫ನೇ ಮಾರ್ಚ್ ೧೯೯೧ರಂದು ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣೆ ಪ್ರಸ್ತಾವದ ಚರ್ಚೆಗೆ ಮುಖ್ಯ ಮಂತ್ರಿಯವರ ಉತ್ತರ ಮತ್ತು ಖಾಸಗಿ ಕಾರ್ಯಕಲಾಪಗಳು. ದಿನಾಂಕ 16ನೇ ಮಾರ್ಚಿ 1991ರಂದು ಅಧಿವೇಶನ ಇರುವುದಿಲ್ಲ. 17ನೇ ಮಾರ್ಚಿ 1991 ರಜೆ ದಿನ. 18ನೇ ಮಾರ್ಚಿ 1991ರಂದು 1991-92ನೇ ಸಾಲಿನ ಆಯವ್ಯಯದ ಮೇಲಿನ ಸಾಮಾನ್ಯ ಚರ್ಚೆ. 19ನೇ ಮಾರ್ಚಿ 1991ರಂದು

1) 1991-92ನೇ ಸಾಲಿನ ಆಯವ್ಯಯದ ಮೇಲಿನ ಸಾಮಾನ್ಯ ಚರ್ಚೆ.

2) ಅನುಪೂರಕ ಅಂದಾಜುಗಳ ಎರಡನೇ ಕಂತಿನ ಮೇಲೆ ಚರ್ಚೆ,

3) 1991ನೇ ಕರ್ನಾಟಕ ಧನ ವಿನಿಯೋಗ ವಿಧೇಯಕ ಲೇಖಾನು ದಾನವನ್ನು ಮಂಡಿಸುವುದು, ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು ಮತ್ತು

4) ಕರ್ನಾಟಕ ಧನ ವಿನಿಯೋಗ ವಿಧೇಯಕ ಅನುಪೂರಕ ಅಂದಾಜುಗಳನ್ನು ಮಂಡಿಸುವುದು, ಪರ್ಯಾಲೋಚಿಸುವುದು ಹಾಗು ಅಂಗೀಕರಿಸುವುದು. 20 ಹಾಗೂ 21ನೇ ಮಾರ್ಚ್ 1991ರಂದು ಶಾಸನಬದ್ಧ ನಿರ್ಣಯ, ಕೆ.ಇ.ಬಿ., ಮತ್ತು ಶಾಸನ ರಚನೆ.

1.35 ಪಿ.ಎಂ.

ಈಗ ನಿಯಮ 334ರ ಬಗ್ಗೆ ಮಾನ್ಯ ಸದಸ್ಯರು ತಮ್ಮ ವಿಚಾರವನ್ನು ಮಂತ್ರಿಗಳ ಗಮನಕ್ಕೆ ತರುವುದು.

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರೆ, ನಾವು ವೀರಪ್ಪನ್ ಬಗ್ಗೆ ಕೇಳಿದ್ದೆವು. ಅದರ ಬಗ್ಗೆ ಸರ್ಕಾರದ ನಿಲವು ಏನು ಎಂದು ತಿಳಿಸಬೇಕು. ವೀರಪ್ಪನ್‌ನನ್ನು ಹಿಡಿದರೆ, ಬಿಟ್ಟರೆ, ಅವನು ಏನಾದ ಎಂಬ ಪ್ರಶ್ನೆಗಳಿಗೆ ಉತ್ತರವೇ ಇಲ್ಲ. ತಾವು ಮುಂದಿನ ವಿಷಯಕ್ಕೆ ಹೊರಟರೆ ನಾವು ಏನು ಮಾಡಬೇಕು. ಕೊಳ್ಳೇಗಾಲ ಮತ್ತು ಚಾಮರಾಜನಗರದ ಫಾರೆಸ್ಟ್ ಅಧಿಕಾರಿಗಳಿಗೆ ಗ್ರಾನೈಟ್‌ನವರು ತೊಂದರೆ ಕೊಡುತ್ತಿದ್ದಾರೆ. ಸರ್ಕಾರ ಅಧಿಕಾರಿಗಳಿಗೆ ರಕ್ಷಣೆ ಕೊಡುತ್ತಿಲ್ಲ. ಅವರಿಗೆ ರಕ್ಷಣೆ ಕೊಡಬೇಕು. ವೀರಪ್ಪನ್ ಬಗ್ಗೆ ಸರ್ಕಾರದ ನಿಲವು ಏನು ಎಂದು ಹೇಳಬೇಕು.

ಉಪಾಧ್ಯಕ್ಷರು : ಮಾನ್ಯ ನಾಗರಾಜ್‌ರವರೆ ಇದರ ಬಗ್ಗೆ ಅವರು ಉತ್ತರ ಕೊಟ್ಟಿದ್ದಾರೆ. ಮಾನ್ಯ ಸಂಸದೀಯ ಸಚಿವರೂ ಸಹ ಸಾಕಷ್ಟು ಉತ್ತರವನ್ನು ಕೊಟ್ಟು ತಮಗೆಲ್ಲಾ ಸಮಾಧಾನವಾಗಿದೆ. ಈಗ ನಾವು ಮುಂದಿನ ವಿಷಯಕ್ಕೆ ಬಂದಿದ್ದೇವೆ. ತಾವು ದಯಮಾಡಿ ಕುಳಿತುಕೊಳ್ಳಬೇಕು. ಈಗ ನಿಯಮ 334ರ ವಿಷಯ.

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರೆ, ಈಗ ವೀರಪ್ಪನ್ ಬಗ್ಗೆ ಸರ್ಕಾರದ ನಿಲುವೇನು?

ಉಪಾಧ್ಯಕ್ಷರು : ತಾವು ಆ ಬಗ್ಗೆ ಬೇರೆ ಒಂದು ಸೂಚನೆಕೊಡಿ.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ : ಅಧ್ಯಕ್ಷರೆ, ವೀರಪ್ಪನ್ ಬಗ್ಗೆ ಅರೆಸ್ಟ್ ಮಾಡುತ್ತೇವೆಂದು ಹೇಳಿದ್ದರೂ ಇದುವರೆಗೂ ಆಗಿಲ್ಲ. ಈ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದಾರೆ. ಮುಂದಿನ ಕ್ರಮ ಏನು, ಅವನನ್ನು ಯಾವಾಗ ಹಿಡಿಯುತ್ತೀರಿ ಎನ್ನುವ ವಿಚಾರ ಸರ್ಕಾರದಿಂದ ಗೊತ್ತಾಗಬೇಕು.

ಶ್ರೀ ಇ.ಟಿ. ಶಂಭುನಾಥ್ : ಅಧ್ಯಕ್ಷರೆ, ಮಾನ್ಯ ಸದಸ್ಯರು ಉಪ ಪ್ರಶ್ನೆಗಳನ್ನು ಕೇಳಿದರೆ ನಾನು ಉತ್ತರ ಹೇಳುತ್ತೇನೆ. ಈಗ ತಾವು ಕೇಳಿದ ಪ್ರಶ್ನೆಗೆ ಉತ್ತರ ಹೇಳಬೇಕೆಂದರೆ, ವೀರಪ್ಪನ್ ಬಗ್ಗೆ ಹೋಮ್ ಡಿಪಾರ್ಟ್‌ಮೆಂಟಿನಿಂದ ಸಹಾಯ ತೆಗೆದುಕೊಂಡು, ನಾವು ದಳ ನೇಮಿಸಿ, ಆದಷ್ಟು ಆತನನ್ನು ನಿಯಂತ್ರಿಸಲಿಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಅಲ್ಲದೇ, ಗೋಪಿನಾಥಂನಲ್ಲಿ ಇವೊತ್ತು ನಾವು ಸಾಮಾಜಿಕವಾದ ಬದಲಾವಣೆಯನ್ನು ಮಾಡಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ : ಅದಕ್ಕಾಗಿಯೇ ತಾವು ಒಬ್ಬ ದೊಡ್ಡ ಅಧಿಕಾರಿಯನ್ನು ನೇಮಕ ಮಾಡಿದಿರಿ. ವೀರಪ್ಪನ್ ನಿಮ್ಮ ಹತ್ತಿರ ಬಂದಿದ್ದನೆ, ಅವನು ಸಿಕ್ಕಿದನೆ, ಇಲ್ಲವೇ, ಅವನು ಎಲ್ಲಿ ಹೋಗಿದ್ದಾನೆ, ಏನು ಕತೆ ಅದನ್ನು ತಿಳಿಸಬೇಕು.

ಶ್ರೀ ಇ.ಟಿ. ಶಂಭುನಾಥ್ : ಈಗ ವೀರಪ್ಪನ್ ಬಗ್ಗೆ ಹೇಳಬೇಕೆಂದರೆ ಅಲ್ಲಿ ಸಮಾಜಿಕ ಬದಲಾವಣೆಯಾಗಿದೆ. ಬೇಕಾದರೆ ತಾವು ನನ್ನ ಜೊತೆಯಲ್ಲಿ ಬಂದು ನೋಡಬಹುದು. ಹಿಂದೆ ಆ ಹಳ್ಳಿಯಲ್ಲಿ ಜನರು ಹೋಗಲಿಕ್ಕೆ ಹೆದರುತ್ತಿದ್ದರು. ಇವತ್ತು ನೀವು ಹೋಗಿ ಯಾರ ಜೊತೆಯಲ್ಲಾದರೂ ಮಿಕ್ಸ್ ಆಗಬಹುದು. ಆ ಒಂದು ಬದಲಾವಣೆಯನ್ನು ನಾವು ಮಾಡಿದ್ದೇವೆ. ಆ ಹಳ್ಳಿಯಲ್ಲಿ ಮನೆಗಳನ್ನು ಕಟ್ಟಿಸಿದ್ದೇವೆ, ರಸ್ತೆಗಳನ್ನು ಮಾಡಿದ್ದೇವೆ. ಜನರು ಸಮಾಗಮವಾಗಿ ಹೊಂದಿಕೊಂಡು ಹೋಗುತ್ತಿದ್ದಾರೆ. ಇವೊತ್ತು ಆ ಜನ ವೀರಪ್ಪನ ಜೊತೆ ಹೋಗಲಿಕ್ಕೆ ಇಷ್ಟಪಡುತ್ತಿಲ್ಲ. ಅವನನ್ನು ದೂರಮಾಡಿದ್ದಾರೆ. ಈಗ ಅವನು ಒಂಟಿಯಾಗಿದ್ದಾನೆ.

ಶ್ರೀ ವಾಟಾಳ್ ನಾಗರಾಜ್ : ಅವನನ್ನು ಹಿಡಿಯುತ್ತೀರೋ ಅಥವಾ ಬಿಡುತ್ತೀರೋ ಎಂದು ನಾವು ಕೇಳುವುದು. ಈಗ ಗೃಹಮಂತ್ರಿಗಳು ಸಭೆಯಲ್ಲೇ ಇದ್ದಾರೆ. ಇದರ ಬಗ್ಗೆ ಸರ್ಕಾರದ ನಿಲುವು ಏನು ಎಂದು ಅವರು ಹೇಳಲಿ ಅದನ್ನು ಬಿಟ್ಟು, ಮನೆ ಕಟ್ಟಿಸಿದ್ದೇವೆ, ರಸ್ತೆ ಮಾಡಿಸಿದ್ದೇವೆ ಅಂದರೆ ವೀರಪ್ಪನ್ ಬಿಟ್ಟುಬಿಡಬೇಕು ಎಂದು

ಅರ್ಥವೇ. ಇದು ಬಹಳ ಗಂಭೀರವಾದಂಥ ಪ್ರಶ್ನೆ. ಅನೇಕ ಜನ ವೀರಪ್ಪನ್ ಇಲ್ಲೇ ಬರುತ್ತಿರುತ್ತಾನೆ, ಭೇಟಿ ಮಾಡುತ್ತಾ ಇರುತ್ತಾನೆ ಎಂದು ಹೇಳುತ್ತಾರೆ. ಇದರ ಬಗ್ಗೆ ಮಾನ್ಯ ಗೃಹ ಮಂತ್ರಿಗಳು ಸರ್ಕಾರದ ನಿಲವು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಮದನಗೋಪಾಲನಾಯಕ್ : ವೀರಪ್ಪನ್‌ನನ್ನು ಯಾವ ರೀತಿ ಹಿಡಿಯುತ್ತೇವೆಂದು ಹೌಸ್‌ನಲ್ಲಿ ಹೇಳಿ ಅವನಿಗೆ ಹುಷಾರ್ ಮಾಡಬೇಕೆ.

ಶ್ರೀ ಇ.ಟಿ. ಶಂಭುನಾಥ್ : ಅವನನ್ನು ಹೇಗೆ ಹಿಡಿಯುತ್ತೇವೆಂದು ನಾವು ವಿವರಣೆ ಕೊಡಲಿಕ್ಕೆ ಸಾಧ್ಯವಿಲ್ಲ. ಏಕೆಂದರೆ, ಅವನನ್ನು ಹಿಡಿದೇ ಹಿಡಿಯುತ್ತೇವೆ, ಹಿಡಿಯಬಾರದು ಎಂದು ಅಲ್ಲ. ಅವನನ್ನು ಹಾಗೆ ಹಿಡಿಯುತ್ತೇವೆ, ಹೀಗೆ ಹಿಡಿಯುತ್ತೇವೆ ಎಂದು ಹೇಳಿದರೆ ಅವನು ಮತ್ತಷ್ಟು ತಪ್ಪಿಸಿ ಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಈಗ ಅವನಿಗೆ ಖರ್ಚುಮಾಡಿರತಕ್ಕ ಹಣ ಏನಿದೆ, ಅದರ ಮೂರುಪಟ್ಟು ಅವನಿಂದ ಸ್ವಾಧೀನಪಡಿಸಿಕೊಂಡಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ : ನೀವು ಏನು ಕ್ರಮ ತೆಗೆದುಕೊಂಡಿದ್ದೀರೆಂಬುದನ್ನು ಹೇಳಿ. ಅವನನ್ನು ಹಿಡಿಯುವ ಬಗ್ಗೆ ಏನು ತೀರ್ಮಾನವನ್ನು ತೆಗೆದುಕೊಂಡಿದ್ದೀರೆಂಬುದನ್ನು ಹೇಳಿ.

ಶ್ರೀ ಧರ್ಮಸಿಂಗ್ : ವೀರಪ್ಪನ್‌ನನ್ನು ಯಾವ ರೀತಿ ಹಿಡಿಯುತ್ತೀರಿ? ಸರ್ಕಾರದವರು ಏನು ಕ್ರಮ ತೆಗೆದುಕೊಂಡಿದ್ದೀರೆಂದು ನೀವು ಪ್ರಶ್ನೆಯನ್ನು ಹಾಕಿಲ್ಲ. ಪ್ರತ್ಯೇಕವಾದ ಪ್ರಶ್ನೆಯನ್ನು ಕೇಳಿದರೆ ಹೇಳುತ್ತೇವೆ.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ : ಸ್ಟಾಡ್ ಮಾಡಿದ್ದೇವೆ, ಕ್ರಮ ತೆಗೆದುಕೊಂಡಿದ್ದೇವೆ ಎಂದು ರಿಪ್ಲೈ ಕೊಟ್ಟಿದ್ದೀರಿ. ಮತ್ತೆ ಏನು ಕೇಳಬೇಕಾಗಿದೆ? ಲಾಸ್ಟ್ ಪ್ಯಾರಾವನ್ನು ನೋಡಿ. ಲಾಸ್ಟ್ ಪ್ಯಾರಾದಲ್ಲಿ ಹೇಳಿದ್ದೀರಿ, ಸ್ಪೆಷಲ್ ಸ್ಟಾಡ್ ಮಾಡಿ....

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಹಿಂದಿನ ಸರ್ಕಾರದವರು ಅದಕ್ಕೆ ಒಬ್ಬ ಜನರಲ್ ಎಂದು ನೇಮಕ ಮಾಡಿದ್ದರು. ಅವರು ಏನು ಮಾಡಿದರು? ಯಾವ ಕಾಡಿಗೆ ಹೋಗಿದ್ದರು? ಯಾರ್ಯಾರನ್ನು ಹಿಡಿದರು, ಯರ್ಯಾರನ್ನು ಬಿಟ್ಟರು, ಎಷ್ಟೆಷ್ಟು ಖರ್ಚಾಗಿದೆ ಅದನ್ನೆಲ್ಲಾ ಹೇಳಿಸ್ವಾಮಿ....

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ : ವೀರಪ್ಪನ್‌ನನ್ನು ಅರೆಸ್ಟ್ ಮಾಡುವುದಕ್ಕೆ ಇವತ್ತು ಬಜೆಟ್‌ನಲ್ಲಿ ಎಷ್ಟು ಹಣಕ್ಕೆ ಪ್ರಾವಿಷನ್ ಮಾಡಿದ್ದೀರೆಂಬುದು ನಮಗೆ ಗೊತ್ತಾಗಲಿ. ಅವನನ್ನು ಐಡೆಂಟಿಫೈ ಮಾಡಲಿಕ್ಕೆ ಎಷ್ಟು ಫೋರ್ಸ್ ಬೇಕು?....

ಶ್ರೀ ಪಿ.ಜಿ.ಆರ್. ಸಿಂಧ್ಯ : ಗ್ರ್ಯಾನೈಟ್ ಕಲ್ಲಿನ ವ್ಯವಹಾರದ ಜೊತೆಯಲ್ಲಿ ಬಹಳ ಸೂಕ್ಷ್ಮವಾಗಿ ಈ ವಿಚಾರವನ್ನು ಮಾನ್ಯ ದೇಶಪಾಂಡೆಯವರು ಹೇಳಿದರು. ಈ ವಿಚಾರವನ್ನು ನಾವು ಏತಕ್ಕೆ ಎತ್ತಿದೆವು ಎಂದರೆ ಗ್ರ್ಯಾನೈಟ್ ಕಲ್ಲಿನ ಕೆಲವು ದೊರೆಗಳು ವೀರಪ್ಪನ್‌ನ ರಕ್ಷಣೆಯನ್ನು ಪಡೆದು ಮಾಡುತ್ತಿದ್ದಾರೆಂಬ ಸುದ್ದಿ ಬಹಳವಾಗಿ ಹಬ್ಬಿದೆ. ಆದ್ದರಿಂದ ಈ ಪ್ರಶ್ನೆಯನ್ನು ನಾವು ಎತ್ತಿರತಕ್ಕದ್ದು. ಈಗ ಪತ್ರಿಕೆಗಳಲ್ಲಿ ಬರುತ್ತಿರುವುದನ್ನು ನೋಡಿದರೆ ಮಂತ್ರಿಗಳಿಗೂ, ಅಧಿಕಾರಿಗಳಿಗೂ ಕೋ-ಆರ್ಡಿನೇಷನ್ ಇಲ್ಲ. ಈ ವಿಚಾರಕ್ಕೆ ಸಂಬಂಧಪಟ್ಟಂತೆ 3-4 ಡಿಪಾರ್ಟ್‌ಮೆಂಟ್‌ಗಳ ಕೋ-ಆರ್ಡಿನೇಷನ್ ಆಗಬೇಕು. ಕೋ-ಆರ್ಡಿನೇಷನ್ ಇದೆಯೋ ಇಲ್ಲವೋ, ವೀರಪ್ಪನ್ ಆ ಬೆಟ್ಟದಲ್ಲಿದ್ದಾನೋ

ಇಲ್ಲವೋ ಎಂಬುದು ಒಂದೂ ಗೊತ್ತಿಲ್ಲವಲ್ಲಾ. ಆದ್ದರಿಂದ ಇದರ ಬಗ್ಗೆ ಸರ್ಕಾರದ ಕ್ರಮ ಏನೆಂಬುದನ್ನು ದಯವಿಟ್ಟು ಹೇಳಿ.

ಶ್ರೀ ಎಂ. ವೀರಪ್ಪ ಮೊಯಿಲಿ : ಈ ವಾದ ಸರಿಯಲ್ಲ. ಮಾನ್ಯ ಸಚಿವರು ಬಹಳ ವಿವರವಾಗಿ ಉತ್ತರವನ್ನು ಕೊಟ್ಟಿದ್ದಾರೆ. ವೀರಪ್ಪನ್‌ಗೆ ಸಂಬಂಧಪಟ್ಟಂತಹ ವಿಚಾರ ತಮಗೆ ಗೊತ್ತಿದೆ. The police are seized of the matter. It is for the Home Minister to answer, not the Forest Minister.

ಆದರೆ ಒಂದು ಕಾಲಿಂಗ್ ಅಟೆನ್‌ಷನ್‌ನಲ್ಲಿ...

ಶ್ರೀ ವಾಟಾಳ್ ನಾಗರಾಜ್ : ಇಲ್ಲಿ ಬಂದಿದೆ ನೋಡಿ....

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಉಪಾಧ್ಯಕ್ಷರೆ, ತಮ್ಮ ಸಚಿವಾಲಯಕ್ಕೆ ನಾನು ವಿನಂತಿಮಾಡಿಕೊಳ್ಳುತ್ತೇನೆ. ಇವು ಬೇರೆಬೇರೆ ವಿಚಾರಗಳು. ವೀರಪ್ಪನ್ ವಿಚಾರ ಸಂಪೂರ್ಣವಾಗಿ ಗೃಹ ಖಾತೆಗೆ ಸಂಬಂಧಪಟ್ಟಿದ್ದು, ಗೃಹ ಖಾತೆಯ ಸಚಿವರಿಗೆ ಸಂಬಂಧಪಟ್ಟಿದ್ದು. ಫಾರೆಸ್ಟ್ ಇಲಾಖೆಯವರಿಗೆ ಗೊತ್ತಿರತಕ್ಕ ವಿಚಾರವನ್ನು ಫಾರೆಸ್ಟ್‌ಗೆ ಸಂಬಂಧಪಟ್ಟ ಮಂತ್ರಿಗಳು ಹೇಳುತ್ತಾರೆ. ಆದರೆ ಅವನನ್ನು ಹಿಡಿಯತಕ್ಕದ್ದು, ಸ್ಪೆಷಲ್ ಸ್ಕ್ವಾಡ್ ಮಾಡತಕ್ಕದ್ದು ಮುಂತಾದ ಎಲ್ಲ ವಿವರಗಳನ್ನೂ ಮಾನ್ಯ ಗೃಹಸಚಿವರು ಕೊಡುತ್ತಾರೆ. ತಮಗೆ ಹೇಳಿಕೆ ಬೇಕಾದರೆ ಗೃಹ ಸಚಿವರು ಕೊಡುತ್ತಾರೆ. ಇದು ಇನ್ನೂ ಅವರ ಗಮನಕ್ಕೆ ಹೋಗಿಲ್ಲ. ಆದ್ದರಿಂದ ಮಾನ್ಯ ಸದಸ್ಯರು ಬೇರೆ ಇನ್ನೊಂದು ಕಾಲಿಂಗ್ ಅಟೆನ್‌ಷನ್‌ನ್ನು ಹಾಕಲಿ, ಅದರ ಬಗ್ಗೆ ಹೇಳಿಕೆ ಕೊಡುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ಇದನ್ನು ತಮ್ಮ ಗಮನಕ್ಕೆ ಏತಕ್ಕೆ ತಂದೆ ಎಂದರೆ, ಅಲ್ಲಿ ಗ್ರ್ಯಾನೈಟ್ಸ್ ದೊರೆಗಳು, ನೀವು ಏನೇ ಮಾಡಿದರೂ ವೀರಪ್ಪನ್‌ನನ್ನು ಹಿಡಿಯುವುದಕ್ಕಾಗುವುದಿಲ್ಲ ಎಂದು ಹೇಳುತ್ತಾರೆ. ಅಲ್ಲಿ ದಿನನಿತ್ಯ ಗ್ರ್ಯಾನೈಟ್‌ನ್ನು ತೆಗೆಯುತ್ತಿದ್ದರೆ ವೀರಪ್ಪನ್‌ನನ್ನು ಹಿಡಿಯುವುದಕ್ಕೆ ನಿಮಗೇ ತೊಂದರೆಯಾಗುತ್ತದೆಂಬ ಉದ್ದೇಶದಿಂದ ನಾವು ಇದನ್ನು ಸೇರಿಸಿದ್ದೇವೆಯೇ ಹೊರತು ಬೇರೆ ಉದ್ದೇಶದ್ದಿಂದಲ್ಲ. ವೀರಪ್ಪನ್‌ನನ್ನು ಹಿಡಿಯಬೇಕಾದರೆ ಆ ಪ್ರದೇಶವೆಲ್ಲಾ ರಿಸರ್ವ್ ಫಾರೆಸ್ಟ್ ಆಗಿರಬೇಕು, ಒಳಗಡೆ ಯಾರನ್ನೂ ಕೂಡ ಬಿಡಬಾರದು. ಗ್ರ್ಯಾನೈಟ್‌ನ್ನು ತೆಗೆಯುವುದರಿಂದ ಪ್ರತಿದಿವಸ ಸಾವಿರಾರು ಜನರು ಒಳಗಡೆ ಹೋಗುತ್ತಿರುತ್ತಾರೆ, ಬರುತ್ತಿರುತ್ತಾರೆ. ಇದರಿಂದಾಗಿ ವೀರಪ್ಪನ್‌ನನ್ನು ಹಿಡಿಯುವುದಕ್ಕಾಗುವುದಿಲ್ಲ ಎನ್ನತಕ್ಕ ಉದ್ದೇಶದಿಂದ ಇದನ್ನು ಸೇರಿಸಿದ್ದೇವೆ.

ಉಪಾಧ್ಯಕ್ಷರು : ಈಗ ನಿಯಮ 334ರ ಮೇರೆಗೆ ಶ್ರೀ ಹರ್ಷಕುಮಾರ ಗೌಡರವರು....

(ಗೊಂದಲ)

ಶ್ರೀ ಹರ್ಷಕುಮಾರಗೌಡ : ಮೈಸೂರು ನಗರದ ಪಡಿತರ ಕಾರ್ಡುದಾರರಿಗೆ ಕಾರ್ಡ್ ಒಂದಕ್ಕೆ ಕೇವಲ ಅರ್ಧ ಕೆ.ಜಿ.ತಾಳಿ ಎಣ್ಣೆ ವಿತರಿಸಲಾಗುತ್ತಿದ್ದು ಬಳಕೆದಾರರು ಅನಿವಾರ್ಯವಾಗಿ ಕಾಳಸಂತೆಯಲ್ಲಿ.

(ಗೊಂದಲ)

(ಈ ಹಂತದಲ್ಲಿ ಮಾನ್ಯ ಬೈರೇಗೌಡರು ಒಂದೇ ಸಮನೆ ಮಾತನಾಡುತ್ತಿದ್ದರು)

ಉಪಾಧ್ಯಕ್ಷರು : ಇದು ಏನು ಬೈರೇಗೌಡರೆ, ನಾನು ಅವರನ್ನು ಕರೆದಿದ್ದೇನೆ. ಮಾನ್ಯ ಹರ್ಷಕುಮಾರ ಗೌಡರು ನಿಯಮ 334ರ ಅಡಿಯಲ್ಲಿ ವಿಷಯವನ್ನು ಪ್ರಸ್ತಾಪಿಸುತ್ತಿದ್ದಾರೆ.

(ಗೊಂದಲ)

MADAM DEPUTY SPEAKER : It will not go on record..